ಕರ್ನಾಟಕ ವಿಧಾನಸಭೆ

ಬುಧವಾರ 28ನೇ ಫೆಬ್ರವರಿ 2001ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-23 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : ಶ್ರೀ ಎಂ.ವಿ. ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದ್ದರು

1. ನಿಲುವಳಿ ಸೂಚನೆ ಮಂಡನೆಗೆ ಬಿ.ಜೆ.ಪಿ. ಪಕ್ಷದವರಿಂದ ಧರಣಿ ಹಾಗೂ ಅನುಮತಿ ಕೋರಿ ಚರ್ಚೆ

ವಿಷಯ : ''ರೈತರು ಬೆಳೆದ ಬೆಳೆಗಳು ಕುಸಿದಿದ್ದು, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ನಮ್ಮದು ಒಂದು ವಿಷಯ ಇದೆ.

ಅಧ್ಯಕ್ಷರು : ಸ್ವಲ್ಪ ತಡೆಯಿರಿ, ಎಲ್ಲಕಿಂತ ಮಿಗಿಲಾಗಿ ನಾನು ಏಕೆ ಸದನಕ್ಕೆ ತಡವಾಗಿ ಬಂದೆ ಎಂಬುದನ್ನು ತಿಳಿಸಬೇಕಾಗಿದೆ. ನಾವು ಕೆಲವು ಮುಖ್ಯವಾದ ಅಂಶಗಳ ಬಗ್ಗೆ ಸರ್ಕಾರದೊಡನೆ ಮಾತನಾಡುತ್ತಿದ್ದೆವು.

(ಗೊಂದಲ)

ಅಧ್ಯಕ್ಷರು : ಈಗ ಎಲ್ಲ ಸದಸ್ಯರು ಎದ್ದು ಮಾತನಾಡುತ್ತಿದ್ದಾರೆ, ಯಾರದ್ದನ್ನು ರೆಕಾರ್ಡ್ ಮಾಡಬೇಡಿ. ಯಾರದ್ದೂ ಬರೆದುಕೊಳ್ಳಬೇಡಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಬಿ.ಆರ್. ಯಾವಗಲ್‌ರವರ ನೇತೃತ್ವದಲ್ಲಿ ಕಾಂಗ್ರೆಸ್(ಐ) ಸದಸ್ಯರು ಬಾವಿಯೊಳಗೆ ಬರಲಿಕ್ಕೆ ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರು ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಅಧ್ಯಕ್ಷ ಪೀಠದ ಮುಂದುಗಡೆ ಬಂದು ರೈತ ವಿರೋಧ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಿದ್ದರು. ಕಾಂಗ್ರೆಸ್ ಸದಸ್ಯರು ಕೂಡ ಕೇಂದ್ರ ಸರ್ಕಾರದ ನೀತಿಗೆ ಧಿಕ್ಕಾರವೆಂದು ಕೂಗುತ್ತಿದ್ದರು)

(ಭಾರಿ ಗೊಂದಲ)

ಅಧ್ಯಕ್ಷರು : ನಾನು ಮಾತನಾಡುವುದಕ್ಕೆ ಸ್ವಲ್ಪ ಅವಕಾಶವನ್ನು ಕೊಡಿ, ಎಲ್ಲರೂ ಕುಳಿತುಕೊಳ್ಳಬೇಕು. ಯಾರೂ ಮಾತನಾಡಬಾರದು ಎಲ್ಲರೂ ಸುಮ್ಮನಿರಬೇಕು.

(ಗೊಂದಲ)

ಈಗ ಅರ್ಧ ಗಂಟೆಯ ಸಭೆಯನ್ನು ಮುಂದೂಡುತ್ತೇನೆ.

(ಸಭೆಯು 11 ಗಂಟೆ 31 ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸದನವು 1 ಗಂಟೆ 30 ನಿಮಿಷಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ವಿರೋಧ ಪಕ್ಷದ ಸದಸ್ಯರೆಲ್ಲರೂ ಬಾವಿಯಲ್ಲಿ ಬಂದು ಘೋಷಣೆಗಳನ್ನು ಕೂಗಲು ಪ್ರಾರಂಭ ಮಾಡಿದರು)

ಅಧ್ಯಕ್ಷರು : ಎಲ್ಲ ಸದಸ್ಯರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ ದಯಮಾಡಿ ಎಲ್ಲ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಬೇಕು.

(ಗೊಂದಲ)

ಈಗ ಸಭೆಯನ್ನು 3-00 ಗಂಟೆಯವರೆಗೆ ಮುಂದೂಡುತ್ತೇನೆ

(ಸದನವು 1 ಗಂಟೆ 41 ನಿಮಷಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸಭೆ ಸೇರಲು ನಿರ್ಧರಿಸಿತು)

(ಸಭೆಯು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು, ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಬೆಳಿಗ್ಗೆಯಿಂದ ಬಹಳ ಪ್ರಾಮುಖ್ಯವಾದಂತಹ ವಿಚಾರವನ್ನು ಚರ್ಚೆ ಮಾಡುವಂಥಾದ್ದರಲ್ಲಿ ತಾಂತ್ರಿಕವಾದ ತೊಂದರೆಯಿಂದ ಇರುವರೆಗೆ ಸಭೆ ಮುಂದೆ ಹೋಗಿದೆ. ಈ ಬಗ್ಗೆ ತಮ್ಮೊಂದಿಗೆ ಸಾಕಷ್ಟು ದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಈಗ ಪ್ರಶ್ನೆ ಇರುವಂಥದ್ದು ಮಾನ್ಯ ವಿರೋಧಪಕ್ಷದ ನಾಯಕರು ಬೆಳಿಗ್ಗೆ ರೈತರು ಬೆಳೆದಿರುವಂತಹ ಬೆಳೆಯ ಬೆಲೆ ಕುಸಿದು ಹೋಗಿದೆ, ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದರು. ಇದನ್ನು ಚರ್ಚೆ ಮಾಡುವುದರಲ್ಲಿ ಸರ್ಕಾರ ಯಾವುದೇ ಪ್ರತಿಷ್ಠೆಯ ಮೇಲೆ ನಿಂತಿಲ್ಲ. ಈ ವಿಷಯ ಚರ್ಚೆಯಾಗಬೇಕೆಂದು ನಾವು ಅಷ್ಟೇ ಕಳಕಳಿಯಿಂದ ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಪ್ರಶ್ನೆ ಏನಿತ್ತು ಎಂದರೆ ಪ್ರಶ್ನೋತ್ತರವನ್ನು ಸ್ಥಗಿತಗೊಳಿಸಿ ಚರ್ಚೆ ಮಾಡಬೇಕೆಂದರೆ ಅದಕ್ಕೆ ನಾವು ಬದ್ಧವಾಗಿರುತ್ತೇವೆ. ಇನ್ನು ಮತ್ತೊಂದು ವಿಚಾರವೇನೆಂದರೆ ಇದೇ ದಿವಸ ಮೆಕ್ಕೆ ಜೋಳದ ಖರೀದಿ ಕೇಂದ್ರಗಳನ್ನು ಕೇಂದ್ರ ಸರ್ಕಾರ ಮುಚ್ಚುವಂತಹ ತೀರ್ಮಾನವನ್ನು ತೆಗೆದುಕೊಂಡಿದೆ, ಎನ್ನುವಂತಹ ಶಂಕೆ ಕೆಲವು ಮಾನ್ಯ ಸದಸ್ಯರುಗಳಲ್ಲಿ ಉಂಟಾಗಿದೆ. ಆದುದರಿಂದ, ಈ ವಿಚಾರವನ್ನು ಚರ್ಚೆ ಮಾಡಬೇಕೆಂಬುದು ಅವರ ಕಳಕಳಿಯ ಬೇಡಿಕೆಯಾಗಿದೆ. ಈಗಲೇ ಈ ಕೊಂಡುಕೊಳ್ಳುವಂತಹ ಕೇಂದ್ರಗಳನ್ನು ಮುಚ್ಚಿದರೆ ತೀರ ಕೆಟ್ಟ ಪರಿಣಾಮ ರೈತರ ಮೇಲಾಗುತ್ತದೆ. ಆದುದರಿಂದ, ಕೇಂದ್ರ ಸರ್ಕಾರದ ಜೊತೆಗೆ ಸಮಾಲೋಚನೆ ಮಾಡುವುದಕ್ಕೆ ನಾವು ಅವರ ಸಹಾಯ ಮತ್ತು ಸಹಕಾರವನ್ನು ಕೇಳಬೇಕು, ಆ ರೀತಿಯಲ್ಲಿ ಸದನದಲ್ಲಿ

ಒಂದು ನಿರ್ಣಯವಾಗಬೇಕೆನ್ನುವಂಥಾದ್ದು ಅವರ ಬೇಡಿಕೆ ಇತ್ತು. ನಾನು ಪುನಃ ಮಾನ್ಯ ಸದಸ್ಯರಲ್ಲಿ ಕೇಳುವುದೇನೆಂದರೆ ಈ ಒಂದು ತಾಂತ್ರಿಕ ವಿಚಾರಗಳನ್ನು ಚರ್ಚೆ ಮಾಡದೇ, ಈಗ ಮೂಲ ವಿಷಯ ಏನಿದೆ, ರೈತರ ಮೇಲೆ ಆಗಿರುವಂತಹ ಪರಿಣಾಮ ಏನಿದೆ, ಅದು ಈ ಬೆಲೆ ಕುಸಿದಿರುವಂತಹ ವಿಚಾರವನ್ನು ತೆಗೆದುಕೊಳ್ಳುವಂಥಾದ್ದಕ್ಕೆ ತಾವು ಯಾವ ಆದೇಶವನ್ನು ಕೊಡುತ್ತಿರೋ ಅದಕ್ಕೆ ಸರ್ಕಾರವೂ ಬದ್ದವಾಗಿರುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ಇದರ ಮಧ್ಯೆ ನಡೆದಿರುವಂತಹ ಕೆಲವು ಪ್ರಸಂಗಗಳನ್ನು ತಾವು ಲಾಜಿಕಲ್ ಇನ್‌ಕ್ಲೂಷನ್‌ಗೆ ಎಳೆದುಕೊಂಡು ಹೋಗಬಾರದು. ಅವರು ಪಾರ್ಲಿಮೆಂಟರಿ ಪ್ರಾಕ್ಟೀಸ್‌ನಲ್ಲಿ ನೋಡಿದ್ದಾರೆ, ತಾವು ನೋಡಿದ್ದೀರಿ ಇಲ್ಲಿರುವಂತಹ ಬಹುತೇಕ ಸದಸ್ಯರುಗಳು ನೋಡಿದ್ದಾರೆ. ಇಂತಹ ಸಾಕಷ್ಟು ಕಹಿ ಪ್ರಸಂಗಗಳು ನಡೆಯುತ್ತವೆ. ನಾವು ಇದರ ಬಗ್ಗೆ ಒಟ್ಟಾಗಿ ಹೇಳಬೇಕೆಂದರೆ ಯಾವ ಉದ್ದೇಶದಿಂದ, ಯಾವ ಕಳಕಳಿಯಿಂದ ಮತ್ತೆ ಯಾವ್ಯಾವ ಭಾಗಗಳಿಂದ ಬರತಕ್ಕಂಥ ನೋವನ್ನು ಅಭಿವ್ಯಕ್ತ ಮಾಡುವಂಥಾದ್ದಕ್ಕೆ ಕೆಲವು ಸಾರಿ ಸಂಸದೀಯ ನಡವಳಿಕೆಗಳನ್ನು ಮೀರಿ ನಡೆದುಕೊಳ್ಳತಕ್ಕಂಥ ಪ್ರಸಂಗಗಳು ಬರುತ್ತದೆ. ಇಂತಹ ಪ್ರಸಂಗಗಳು ಏನೊ ಹೊಸದು ಅಲ್ಲ. ನಮ್ಮ ಐವತ್ತು ವರ್ಷಗಳ ಸಂಸದೀಯ ಜೀವನದಲ್ಲಿ ನಾವು ಸಾಕಷ್ಟು ಈ ರೀತಿಯ ಪ್ರಸಂಗಗಳನ್ನು ನೋಡಿದ್ದೇವೆ. ಆದುದರಿಂದ ಅದನ್ನೇ ಪ್ರಧಾನವಾಗಿಟ್ಟುಕೊಳ್ಳದೇ ಮಾನ್ಯ ಸದಸ್ಯರು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಅವರಲ್ಲಿ ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನಾದರೂ ಸಂಸದೀಯ ನಡವಳಿಗಳು ಸರಿಯಾಗಿ ಆಗಲಿಲ್ಲವೆನ್ನುವಂತಹ ಭಾವನೆ ಇದ್ದರೆ, ಅದನ್ನು ಮುಂದೆ ಸರಿಪಡಿಸಿಕೊಳ್ಳುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆನ್ನುವಂತಹ ವಿಶ್ವಾಸವನ್ನು ಈ ಮೂಲಕ ಕೊಡಬಯಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಬಹಳ ಮಹತ್ವವಾದಂತಹ ವಿಚಾರವನ್ನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡುವುದಕ್ಕೆ ನಾನು ಪ್ರಯತ್ನ ಮಾಡಿದೆ. ಅದಕ್ಕೆ ತಾವು ಕೂಡ ಸಹಮತ ವ್ಯಕ್ತಪಡಿಸಿದ್ದೀರಿ ಈ ವಿಷಯವಾಗಿ ತಮ್ಮ ಚೇಂಬರ್‌ನಲ್ಲೂ ಚರ್ಚೆಯಾಯಿತು. ಅದಕ್ಕೆ ತಾವು ಕೂಡ ಪ್ರಾಥಮಿಕವಾಗಿ ಪ್ರಸ್ತಾಪ ಮಾಡುವಂಥಾದ್ದಕ್ಕೆ ಅನುಮತಿಯನ್ನು ಕೊಟ್ಟಿರಿ. ಆದರೆ, ಇವತ್ತು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಆದಂತಹ ಘಟನೆಯ ಬಗ್ಗೆ ಹೇಳುತ್ತೇನೆ. ಪಾರ್ಲಿಮೆಂಟರಿ ಸಿಸ್ಟಂನಲ್ಲಿ ಸಭಾಧ್ಯಕ್ಷರ ಸ್ಥಾನಕ್ಕೆ ಮರ್ಯಾದೆ ಇದೆ, ಗೌರವವಿದೆ. ಅದಕ್ಕೆ ಯಾರೂ ಸಹ ಕುಂದು ತರುವಂತಹ ಕೆಲಸವನ್ನು ಮಾಡಬಾರದು. ಸಭೆಯಲ್ಲಿ ಯಾರಾದರೂ ಮಾತನಾಡುವವರು ಇದ್ದರೆ ಅವರು ತಮ್ಮ ಅನುಮತಿಯನ್ನು ಪಡೆದುಕೊಂಡು ಮಾತನಾಡಬೇಕಾಗುತ್ತದೆ, ಅಥವಾ ನಾನು ಮಹತ್ವವಾದಂತಹ ವಿಷಯವೊಂದನ್ನು ಸಭೆಯಲ್ಲಿ ಪ್ರಸ್ತಾಪ ಮಾಡುವಂಥಾದ್ದು ಇದೆ, ಅದಕ್ಕೆ ತಾವು ಅವಕಾಶವನ್ನು ಮಾಡಿಕೊಡಿ ಎಂದು ಅದರೂ ಕೇಳಬೇಕಾಗಿತ್ತು. ಆದರೆ, ಯಾವುದೇ ವಿಷಯವನ್ನು ಪ್ರಸ್ತಾಪ ಮಾಡದೇ ದಿಢೀರನೆ ಸಭಾಧ್ಯಕ್ಷರ ಗಮನಕ್ಕೂ ತರದೇ, ಪ್ರತಿಪಕ್ಷದ ನಾಯಕರು ಸಭೆಯಲ್ಲಿ ನಿಂತು ಮಹತ್ವವಾದಂತಹ ವಿಷಯವನ್ನು ಮಾತನಾಡುವಂತಹ ಸಂದರ್ಭದಲ್ಲಿ ಆಗಿರುವಂಥಾದ್ದು. ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಸಂಕಷ್ಟದಲ್ಲಿದ್ದಾರೆ, ಇವರು ಬೆಳೆದಂತಹ ಬೆಳೆಯ ಬೆಲೆಗಳು ಕುಸಿತವಾಗಿದೆ. ಇಂತಹ ಒಂದು ವಿಷಯವನ್ನು ಪ್ರಸ್ತಾಪ ಮಾಡುವಂತಹ ಹಂತದಲ್ಲಿ ಈ ಸದನದ

ಗೌರವಾನ್ವಿತ ಸದಸ್ಯರುಗಳು ಯಾವುದೇ ವಿಷಯವನ್ನು ಪ್ರಸ್ತಾಪ ಮಾಡದೇ, ದಿಢೀರನೆ ಸದನದ ಬಾವಿಗೆ ಬಂದು ಘೋಷಣೆ ಕೂಗುವಂಥಾದ್ದು ಇದು ತಾಂತ್ರಿಕ ದೋಷವಲ್ಲ. ಈ ನಡವಳಿಯ ಬಗ್ಗೆ ತಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಚಂದ್ರೇಗೌಡರು ಅತ್ಯಂತ ಹಿರಿಯ ಸಂಸದೀಯ ಪಟುಗಳಾಗಿದ್ದಾರೆ. ಅವರು ಸಾಕಷ್ಟು ಸಾರಿ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಮಾರ್ಗದರ್ಶನ ಮಾಡಿರುವಂಥಾದ್ದನ್ನು ನಾವು ನೋಡಿದ್ದೇವೆ. ಅವರು ಇದು ಸರಿಯಾಗಿಲ್ಲ, ಇದು ಪಾರ್ಲಿಮೆಂಟರಿ ಸಿಸ್ಟಂಗೆ ಸರಿಯಾಗಿಲ್ಲವೆನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ನಾವು ನೋಡಿದ್ದೇವೆ. ಅವರು ಇವತ್ತು ಅವರದೇ ಪಕ್ಷದ 8- 10 ಜನ ಶಾಸಕರು ಸದನದ ಬಾವಿಗೆ ಬಂದು ಘೋಷಣೆ ಮಾಡಿರುವಂಥಾದ್ದು. ಇವರು ಯಾವುದೇ ವಿಷಯವನ್ನು ಪ್ರಸ್ತಾಪ ಮಾಡದೇ, ತಮ್ಮ ಅನುಮತಿಯನ್ನು ತೆಗೆದುಕೊಳ್ಳದೇ, ಸಭಾಧ್ಯಕ್ಷರ ಸ್ಥಾನಕ್ಕೆ ಇರುವಂತಹ ಗೌರವಕ್ಕೆ ಚ್ಯುತಿ ತರುವಂತಹ ಕೆಲಸವನ್ನು ಮಾಡಿದ್ದಾರೆ. ಅವರು ಇದನ್ನು ಗಂಭೀರವಾಗಿ ತೆಗೆದುಕೊಳ್ಳದೇ, ಇದರ ಬಗ್ಗೆ ಯಾವುದೇ ಒಂದು ವಿಷಾದವನ್ನು ವ್ಯಕ್ತಪಡಿಸದೇ, ಇದು ಒಂದು ತಾಂತ್ರಿಕವಾದ ದೋಷವೆಂದು ಹೇಳುತ್ತಿದ್ದಾರೆ. ಇದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರೇ, ಅವರು ವಿಷಾದವನ್ನು ವ್ಯಕ್ತಪಡಿಸಿದ್ದಾರಲ್ಲಾ...

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರು ವಿಷಾದವನ್ನು ವ್ಯಕ್ತಪಡಿಸಿಲ್ಲ.

MR. SPEAKER : The Hon'ble Minister has said: let us not repeat this type of action.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ತಮ್ಮ ಗೌರವದ ಪ್ರಶ್ನೆ ಕೂಡ ಆಡಗಿದೆ. ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಏನು ಪ್ರಸ್ತಾಪ ಮಾಡದೇ ಏನು ಹೇಳದ ಹಾಗೆ, ತಮ್ಮ ಅನುಮತಿಯನ್ನು ತೆಗೆದುಕೊಳ್ಳದೇ ಈ ರೀತಿ ಮಾಡಿದ್ದಾರೆ. ತಾವು ಈ ಪೀಠದ ಗೌರವದ ಪ್ರಶ್ನೆಯನ್ನು ಕೂಡ ನೋಡಬೇಕಾಗುತ್ತದೆ. ಇವತ್ತು ಮಾನ್ಯ ಚಂದ್ರೇಗೌಡರು ಹಿರಿಯ ಸಂಸದೀಯ ಪಟುಗಳು ಅವರು ಸಭೆಯಲ್ಲಿ ಏನು ಆಗಿಲ್ಲ, ಏನೋ ಇಂತಹ ಘಟನೆಗಳು ನಡೆಯುತ್ತವೆನ್ನುವಂತಹ ರೀತಿಯಲ್ಲಿ ಬಹಳ ಸಣ್ಣದಾಗಿ ಈ ವಿಷಯವನ್ನು ತೆಗೆದುಕೊಂಡಿರುವಂಥಾದ್ದು ಬಹಳ ಖೇದವೆನಿಸುತ್ತದೆ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮಾನ್ಯ ಚಂದ್ರೇಗೌಡರು ಈ ರೀತಿ ಪುನರಾವರ್ತನೆಯಾಗದ ಹಾಗೆ ನೋಡಿಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ನಿಜವಾಗಿ ಕೇಳಿರುವಂಥಾದ್ದು ಏಕಾಏಕಿ ಸದನದ ಬಾವಿಗೆ ಬಂದಂತಹ ಆ ಶಾಸಕರೇ ವಿಷಾದವನ್ನು ವ್ಯಕ್ತಪಡಿಸಬೇಕೆಂದು ಕೇಳಿದ್ದೇವೆ. ಅದಕ್ಕೆ ಕಾನೂನು ಸಚಿವರು ಏನು ಹೇಳಿದ್ದಾರೆಂದರೆ ಅವರ ಪರವಾಗಿ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದರು. ಆದರೆ ಅವರು ವಿಷಾದವೆನ್ನುವಂತಹ ಶಬ್ಧವನ್ನು ಹೇಳಲಿಲ್ಲ. ಅವರಿಗೆ ಅದನ್ನು ಹೇಳುವುದಕ್ಕೆ ಮುಜುಗರವಾಗುತ್ತದೋ ಹೇಗೆ? ಅವರು ಏಕೆ ಹೀಗೆ ಮಾಡುತ್ತಿದ್ದಾರೆ? ಈ ಕಡೆ ಅವರನ್ನು ಡಿಫೆಂಡ್ ಮಾಡಿಕೊಳ್ಳುವಂಥಾದ್ದು, ಈ ಸಂಸದೀಯ

ವ್ಯವಸ್ಥೆಯಲ್ಲಿ ಈ ರೀತಿಯಲ್ಲಿ ನಡೆಯುವಂಥಾದ್ದು ಇದೆ. ನಾವು ಇಲ್ಲಿಯವರೆಗೆ ಈ ಸದನಕ್ಕೆ ಮಹತ್ವವನ್ನು ಕೊಟ್ಟು, ಗೌರವವನ್ನು ಕೊಟ್ಟು, ಬಹಳ ಸಭ್ಯ ರೀತಿಯಲ್ಲಿ ಪ್ರತಿಪಕ್ಷದವರು ಸಹಕಾರವನ್ನು ಕೊಟ್ಟುಕೊಂಡು ಬಂದಿದ್ದೇವೆ. ಅಂಥಾದ್ದರಲ್ಲಿ ಈ ಒಂದು ನಡವಳಿಯಿಂದ ಇವರು ಏನು ಸಾಧನೆ ಮಾಡುವಂಥಾದ್ದು ಇದೆ. ಇವತ್ತು ಯಾವ ವಿಷಯಕ್ಕೆ ಮಹತ್ವವಿದೆ, ಅದನ್ನು ಅವರು ಪ್ರಸ್ತಾಪ ಮಾಡಲಿ, ನಮ್ಮ ವಿಷಯಗಳು ಚರ್ಚೆಯಾದ ಮೇಲೆ ಆ ವಿಷಯಗಳನ್ನು ಪ್ರಸ್ತಾಪ ಮಾಡಬಹುದಾಗಿತ್ತು. ನಾವು ತಮ್ಮ ಚೇಂಬರ್‌ನಲ್ಲಿದ್ದಂತಹ ಸಂದರ್ಭದಲ್ಲಿ ಆ ವಿಷಯ ಪ್ರಸ್ತಾಪವಾಯಿತು. ಆ ಬಗ್ಗೆ ನಾವು ಕೇಂದ್ರ ಸಚಿವರೊಡನೆ ಮಾತನಾಡಿದ್ದು ಏನು? ಇದರ ಬಗ್ಗೆ ಈಗಾಗಲೇ ಅದಕ್ಕೆ ಪರಿಹಾರವೂ ಸಿಕ್ಕಿದೆ. ಮಾನ್ಯ ಆಹಾರ ಮಂತ್ರಿಗಳು ಹೋಗಿ ಇದನ್ನು ಚರ್ಚೆ ಮಾಡುತ್ತಿದ್ದಾರೆ. ಅವರು ಬರುವವರೆಗೆ ಕಾಯೋಣವೆನ್ನುವಂಥಾದ್ದು ಇಲ್ಲವೆಂದರೆ ಇದು ಏನು ಅರ್ಥವಾನ್ನು ಸೂಚಿಸುತ್ತದೆ. ತಾವು ದಯಮಾಡಿ ಇದನ್ನು ವಿಚಾರ ಮಾಡಬೇಕು. ಇವತ್ತು ಮಾನ್ಯ ಕಾನೂನು ಸಚಿವರು ಇದನ್ನು ಬಹಳ ಹಗುರವಾಗಿ ತೆಗೆದುಕೊಂಡಿದ್ದಾರೆ. ಈ ರೀತಿಯಾಗಿ ಅವರು ಮಾಡುತ್ತಾರೆನ್ನುವಂತಹ ಕಲ್ಪನೆಯೂ ನಮಗೆ ಇರಲಿಲ್ಲ. ಈ ರೀತಿ ನಡೆದುಕೊಂಡಂತಹ ಶಾಸಕರ ನಡತೆಯ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳದೇ ಹಗುರವಾಗಿ ತೆಗೆದುಕೊಂಡಿರುವಂಥಾದ್ದು ನಮಗೆ ಖೇದವೆನಿಸುತ್ತದೆ, ನಮಗೆ ಸಮಾಧಾನವಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ, ತಾವು ಇದರ ಬಗ್ಗೆ ಏನು ಮಾಡುತ್ತೀರೆನ್ನುವಂತಹ ವಿಚಾರವನ್ನು ತಮಗೆ ಬಿಡುತ್ತೇನೆ, ಇಲ್ಲಿ ಅಧ್ಯಕ್ಷರ ಸ್ಥಾನದ ಗೌರವದ ಪ್ರಶ್ನೆಯೂ ಇದೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಬಹಳ ನೊಂದ ಮನಸ್ಸಿನಿಂದ ಇಲ್ಲಿ ಮಾತನಾಡುವುದಕ್ಕೆ ಬಯಸುತ್ತೇನೆ. ಕಾರಣ, ಬೆಳಿಗ್ಗೆಯಿಂದ ಈ ಸದನದಲ್ಲಿ ಏನಾಯಿತು, ಏನಾಗುತ್ತದೆಂಬುದು ನಮಗೆ ಅರ್ಥವಾಗಲಿಲ್ಲ. ರಾಜ್ಯದಲ್ಲಿ ರೈತರ ಜ್ವಲಂತ ಸಮಸ್ಯೆಗಳ ಬಗ್ಗೆ ಸರ್ಕಾರ ರಾಜ್ಯಪಾಲರ ಭಾಷಣದ ಮೂಲಕ ಯಾವರೀತಿಯಾಗಿ ತೀವ್ರವಾದ ಕಳವಳವನ್ನು ವ್ಯಕ್ತ ಮಾಡಿದ್ದಾರೆ, ಅದೇ ರೀತಿಯಾಗಿ ನಾವು ಕೂಡ ಒಂದು ನಿಲುವಳಿಸೂಚನೆಯ ಮೂಲಕ, ಅನೇಕ ರೈತರ ಮುಖಂಡರು, ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಜಗದೀಶ್ ಶೆಟ್ಟರ್, ನಾವು ಕೂಡ ಪ್ರತ್ಯೇಕ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಒಂದು ಸಂಪ್ರದಾಯವೇನಿದೆ ಎಂದರೆ, ವಿಧಾನಸಭೆ ಅಧಿವೇಶನ ಪ್ರಾರಂಭವಾಗುವುದಕ್ಕಿಂತ ಮುಂಚೆ, ವಿರೋಧಪಕ್ಷದ ನಾಯಕರು ಅಥವಾ ಸದಸ್ಯರು ಅಧ್ಯಕ್ಷರ ಹತ್ತಿರ ಬಂದು ಮಾತನಾಡಿ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದು ಅಥವಾ ಈ ರೀತಿಯ ವಿಚಾರಗಳನ್ನು ಪ್ರಸ್ತಾಪ ಮಾಡುವ ಸಂಪ್ರದಾಯವನ್ನು ಮೊದಲಿನಿಂದಲೂ ಹಾಕಿಕೊಂಡು ಬಂದಿದ್ದೇವೆ. ಅದೇರೀತಿಯಾಗಿ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ನಾನು ಕೂಡ ತಮ್ಮೊಡನೆ ಚರ್ಚೆ ಮಾಡಿದೆವು, ಆಯಿತು, ನಿಲುವಿನ ಸೂಚನೆ ಅಥವಾ ಬೇರೆ ರೂಪದಲ್ಲಿ ಆ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡೋಣ, ಸರ್ಕಾರದವರು ಅಭಿಪ್ರಾಯವನ್ನು ಕೇಳುತ್ತೇನೆ ಎನ್ನುವ ಅಭಿಪ್ರಾಯವನ್ನು ಕೂಡ ತಾವು ವ್ಯಕ್ತಮಾಡಿದಿರಿ. ಆದಾದ ಮೇಲೆ ಇಲ್ಲಿ ಅದನ್ನು ಯಾವುದಾದರೂ ರೂಪದಲ್ಲಿ ಚರ್ಚೆ ಮಾಡೋಣವೆಂದು ಇಲ್ಲಿಗೆ ಬಂದ ತಕ್ಷಣವೇ ವಿರೋಧಪಕ್ಷದ ನಾಯಕರು ಆ ವಿಷಯವನ್ನು ಚರ್ಚೆ ಮಾಡಬೇಕೆನ್ನುವುದರೊಳಗಾಗಿ ಆಡಳಿತಪಕ್ಷದ ಶಾಸಕರು ಒಂದು ರೀತಿಯಲ್ಲಿ

ಧಾಳಿ ಮಾಡುವ ರೀತಿಯಲ್ಲಿ ವರ್ತಿಸಿದರು. ಕೇಂದ್ರ ಸರ್ಕಾರ ಜೋಳ ಕೊಳ್ಳುವುದನ್ನು ಇವತ್ತಿನಿಂದ ನಿಲ್ಲಿಸುತ್ತದೆನ್ನುವ ಕಾಳಜಿ ನಮ್ಮಲ್ಲಿ ಹಾಗೂ ಅವರಲ್ಲಿ ಇದೆ. ಈ ವಿಚಾರವನ್ನು ನಿನ್ನೆ ಆಹಾರ ಮಂತ್ರಿಗಳಾದ ಇನಾಂದಾರ್‌ರವರು ವಿರೋಧಪಕ್ಷದನಾಯಕರೊಡನೆ ನಮ್ಮೊಡನೆ ಹಾಗೂ ಬೇರೆ ನಾಯಕರೊಡನೆ ತಿಳಿಸಿ ಏನಂತಿ ಮಾಡಿಕೊಂಡರು. ಏಪ್ರಿಲ್ ತಿಂಗಳವರೆವಿಗೂ ಮೆಕ್ಕೆ ಜೋಳವನ್ನು ಕೊಳ್ಳುವಂತೆ ಸಹಕರಿಸಲು ಕೇಂದ್ರ ಸರ್ಕಾರದವರು ಮುಂದಾಗಬೇಕೆಂದು ಒಂದು ನಿರ್ಣಯವನ್ನು ಮಾಡೋಣವೆನ್ನುವ ಮಾತನ್ನು ಅವರು ಹೇಳಿದ್ದರು, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಕೇಂದ್ರ ಮಂತ್ರಿಗಳೊಡನೆ ಮಾತನಾಡಿದ್ದಾರೆ, ಅವರು ಪರಿಶೀಲನೆ ಮಾಡುವ ಭರವಸೆಯನ್ನು ಕೊಟ್ಟಿದ್ದಾರೆ, ಕೇಂದ್ರ ಮಂತ್ರಿಗಳಾದ ಶ್ರೀ ಶ್ರೀನಿವಾಸ್‌ಪ್ರಸಾದ್‌ರವರು ಇಲ್ಲೇ ಇದ್ದರು ಅವರೊಡನೆ ನಾವು ಕೂಡ ಮಾತನಾಡಿದ್ದೇವೆ, ಅವರು ಕೂಡ ಭರವಸೆಯನ್ನು ಕೊಟ್ಟಿದ್ದಾರೆ. ಇಂತಹ ಸನ್ನಿವೇಶವಿರುವ ಸಂದರ್ಭದಲ್ಲಿ ಕೊನೆಯಪಕ್ಷ ಎದ್ದುನಿಂತು ಆಡಳಿತಪಕ್ಷದ ಗೌರವಾನ್ವಿತ ಸದಸ್ಯರು ನಾವು ಇಂತಹ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇವೆ ಪ್ರಶ್ನೋತ್ತರವೇಳೆಯನ್ನು ನಿಲ್ಲಿಸಬೇಕೆಂದು ಹೇಳಬಹುದಾಗಿತ್ತು. ಏನು ಹೇಳದೇ ಘೋಷಣೆಗಳನ್ನು ಕೂಗಿ ವಿಧಾನಸಭೆಯ ಕಾರ್ಯಕಲಾಪಗಳನ್ನು ಈ ರೀತಿಯಾಗಿ ನಿಲ್ಲಿಸುವುದಾದರೆ ಅದು ಸದನಕ್ಕೆ ಗೌರವ ತರುವ ವಿಷಯ ಅಷ್ಟೇ ಅಲ್ಲ, ತಮ್ಮ ಸ್ಥಾನಕ್ಕೂ ಅಗೌರವತರುವ ವಿಚಾರವೆಂದು ಹೇಳುವುದಕ್ಕೆ ಬಯಸುತ್ತೇನೆ. ಕೇಂದ್ರಸರ್ಕಾರದ ಮಾಡಲಿಲ್ಲವೆಂದು ಅವರು ಹೇಳುವುದು, ಕೇಂದ್ರ ಸರ್ಕಾರ ಎಲ್ಲಾ ಮಾಡಿದೆ ಎಂದು ಇವರು ಹೇಳುವುದು ಇದರಿಂದ ಪರಿಹಾರವಾಗುವುದಿಲ್ಲ. ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಾದರೆ, ಚರ್ಚೆ ಮಾಡಬೇಕೆಂದರೆ, ಆ ಚರ್ಚೆಗೆ ಅಡ್ಡಿ ಬರುವ ರೀತಿಯಲ್ಲಿ ಇವರು ಏತಕ್ಕೆ ಬರಬೇಕಾಗಿತ್ತು? ಇವತ್ತು ಈ ವಿಚಾರವನ್ನು ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡಬೇಕೆಂದಾಗ ಆಡಳಿತ ಪಕ್ಷದವರು ಅದೇ ವಿಷಯವನ್ನು ಚರ್ಚೆ ಮಾಡಬೇಕೆಂದಿದ್ದರೆ, ಅವರಿಗೂ ಕೂಡ ಚರ್ಚೆಯ ಸಮಯದಲ್ಲಿ ಅಧ್ಯಕ್ಷರು ಅವಕಾಶ ಕೊಡುತ್ತಿದ್ದರಿ. ನನಗೆ ಬಹಳ ನೋವಾಗಿದ್ದೆಂದರೆ, ಮಾನ್ಯ ಸಭಾನಾಯಕರು ಇಲ್ಲಿರುವ ಸಂದರ್ಭದಲ್ಲಿ ಆಡಳಿತಪಕ್ಷದ ಶಾಸಕರು ಅವರ ನಿಯಂತ್ರಣದಲ್ಲಿರುತ್ತಾರೆ, ಇದೆಲ್ಲಾ ಅವರ ಸಮ್ಮುಖದಲ್ಲೇ ಆಗಿದೆ, ಅವರು ಮೌನವಾಗಿಯೆ ಇದ್ದರು ಇದರಿಂದ ಜನಗಳಿಗೆ ಏನು ಸಂದೇಶ ಹೋಗುತ್ತದೆ ಜವಾಬ್ದಾರಿಯನ್ನು ಹೊತ್ತಿರುವವರು ಇದ್ದುಕೊಂಡು ಈ ರೀತಿಯಾಗಿ ವಿಧಾನಸಭೆಯ ನಡವಳಿಕೆ ನಡೆಯುತ್ತಿದೆ, ಸಮಸ್ಯೆ ಬಗೆಹರಿಯಬೇಕೆನ್ನುವುದಕ್ಕಿಂತ ಹೆಚ್ಚಾಗಿ ಕೇವಲ ಪ್ರಚಾರಕೋಸ್ಕರ, ಆ ಸರ್ಕಾರದ ಮೇಲೆ ನಾವು ಗೂಬೆ ಕೂರಿಸುವುದು, ನಮ್ಮ ಸರ್ಕಾರದ ಮೇಲೆ ಅವರು ಗೂಬೆ ಕೂರಿಸುವುದು ಇದರಿಂದ ಏನು ಉಪಯೋಗವಾಗುವುದಿಲ್ಲ. ಸಭಾನಾಯಕರು ಈ ವಿಚಾರದಲಿ ತಮ್ಮ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ, ಈ ರೀತಿಯಾಗಿ ಎರಡನೇ ಸಾರಿ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ, ಹಿಂದೆ ಅವರ ಅಂತರಿಕ ಜಗಳದಿಂದ 60-70 ಜನ ದಾಳಿ ಮಾಡಿದ್ದರು ಈ ರೀತಿಯಾಗಿ ಆಗಬಾರದು. ಆಗದಂತೆ ಮಾನ್ಯ ಮುಖ್ಯಮಂತ್ರಿಗಳೇ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ವಿಚಾರದಲ್ಲಿ ನಡೆದುಕೊಂಡ ಆಡಳಿತಪಕ್ಷದವರ ರೀತಿ ಸತ್ಸಂಪ್ರದಾಯವಲ್ಲ. ನಿನ್ನೆಯೂ ಕೂಡ ನಾನು ಹೇಳಿದೆ, ಜೆ. ಹೆಚ್. ಪಟೇಲ್‌ರವರು ಅನಾವಶ್ಯಕವಾಗಿ ಧರಣ ಮಾಡುವುದಕ್ಕೆ ಹೋಗಬೇಡಿ, ಚರ್ಚೆಯಲ್ಲಿ ಭಾಗವಹಿಸಿ ಎಷ್ಟು ಬೇಕಾದರೂ ಮಾತನಾಡಿ ಎನ್ನುವ ಮಾತನ್ನು ಹೇಳಿದ್ದರು. ಮುಖ್ಯಮಂತ್ರಿಗಳು ಚರ್ಚೆ ಮಾಡೋಣ ಯಾವುದಾದರೂ ಒಂದು

ಅಭಿಪ್ರಾಯಕ್ಕೆ ಬರೋಣವೆಂದು ಪದೇ ಪದೇ ಹೇಳುತ್ತಿರುತ್ತಾರೆ. ವಿಶೇಷವಾಗಿ ಡಬ್ಲ್ಯು ಟಿಒ ಅಗ್ರಿಮೆಂಟ್ ಬಗ್ಗೆ, ರೈತರ ಸಮಸ್ಯೆಗಳ ಬಗ್ಗೆ ಮೂರು ದಿವಸಗಳ ಅಧಿವೇಶನವನ್ನು ಕರೆಯಿರಿ ಎಂದು ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೆ, ಅದಕ್ಕೆ ಅವರು ಒಪ್ಪಿಕೊಂಡಿದ್ದರು. ಅದನ್ನು ಇವತ್ತಿನ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ, ಆದರೆ ಈ ರೀತಿಯಾಗಿ ವರ್ತಿಸುವುದು ತಮಗೆ ಸಭಾನಾಯಕರಿಗೆ, ಸದನಕ್ಕೆ ಅಗೌರವ ತರುವಂತಹದ್ದು, ಮತ್ತು ಚರ್ಚೆಯನ್ನು ಮೊಟಕು ಮಾಡುವ ಒಂದು ಪ್ರಯತ್ನ. ಈ ನಡವಳಿಕೆ ಖಂಡನೀಯವಾದುದು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ; ಈ ರೀತಿಯಾಗಿ ನಡೆದುಕೊಳ್ಳುವುದು ನಮಗ್ಯಾರಿಗೂ ಗೌರವ ತರುವಂತಹ ವಿಚಾರವಲ್ಲ, ಇದನ್ನು ನೋಡಿ ಜನರು ನಗುತ್ತಾರೆ. ಮುನಿಸಿಪಾಲಿಟಿಗಳಲ್ಲಿ , ತಾಲ್ಲೂಕು ಪಂಚಾಯತಿಗಳಲ್ಲಿ ಕೂಡ ಈ ರೀತಿಯಾಗಿ ಆಗುವುದಿಲ್ಲ. ವಿನಾಕಾರಣ ಈ ರೀತಿಯಾಗಿ ನಡೆಯುತ್ತಿರುವ ಬಗ್ಗೆ ಯಾರಿಗೂ ಗೊತ್ತಿಲ್ಲ, ಪತ್ರಿಕಾಕರ್ತರು ಏನಾಯಿತೆಂದು ಧಂಗಾಗಿ ಕುಳಿತಿದ್ದಾರೆ. ಇದು ಕೊನೆಗಾಣಬೇಕು, ಮತ್ತೆ ಈ ರೀತಿಯ ನಡವಳಿಕೆಗಳು ಆಗಬಾರದು, ಆ ನಿಟ್ಟಿನಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು, ಅಡಳಿತ ಪಕ್ಷದ ಶಾಸಕರ ಸಮಸ್ಯೆಗಳಿದ್ದರೂ, ಸಿಎಲ್‌ಪಿ ಸಭೆಯಲ್ಲಿ ಚರ್ಚೆ ಮಾಡಲಾಗುತ್ತದೆ, ಬಾಕಿ ಸಮಯದಲ್ಲೂ ಮುಖ್ಯಮಂತ್ರಿಗಳು ಸಿಗುವುದರಿಂದ ಅವರೊಡನೆ ಚರ್ಚೆ ಮಾಡಬಹುದು ಈ ರೀತಿಯಾಗಿ ವರ್ತಿಸುವುದು ಕಾಂಗ್ರೆಸ್ ಪಕ್ಷಕ್ಕೂ ಕೂಡ ಒಳ್ಳೆಯದಲ್ಲ, ಅದರಲ್ಲೂ ಸದನಕ್ಕಂತೂ ಖಂಡಿತವಾಗಿಯೂ ಗೌರವ ತರುವ ವಿಚಾರವಲ್ಲ, ಅದನ್ನು ಅವರು ಕೂಡ ಖಂಡಿಸುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ನಾವೆಲ್ಲ ತಮ್ಮ ಹತ್ತಿರ ಬಂದಿದ್ದೆವು, ಬೆಳಿಗ್ಗೆಯೇ ತಮಗೊಂದು ಪತ್ರವನ್ನು ನೀಡಿದ್ದೆವು, ಮೆಕ್ಕೆಜೋಳ ಖರೀದಿ ಇವತ್ತೇನು ಕೇಂದ್ರ ಸರ್ಕಾರದವರು ನಿಲ್ಲಿಸುತ್ತಾರೆ ಇದರ ಬಗ್ಗೆ ಶೂನ್ಯವೇಳೆಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ತಮಗೆ ಹೇಳಿದ್ದೆವು; ಗೌರವಾನ್ವಿತ ಎಲ್ಲಾ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರು ಇದ್ದರು, ಈ ಚರ್ಚೆಗೆ ಪ್ರಶ್ನೋತ್ತರ ವೇಳೆ ಮುಗಿದನಂತರ ಅವಕಾಶ ಮಾಡಿಕೊಡುತ್ತೇನೆಂದು ತಾವು ಹೇಳಿದ್ದಿರಿ, ಅದಕ್ಕೆ ಅವರು ಬಹುತೇಕ ಒಪ್ಪಿದ್ದರು. ನವಲಗುಂದ, ನರಗುಂದ, ರೋಣ, ಗದಗ್, ಬೆಳಗಾಂ, ಬಾಗಲಕೋಟೆ, ಬಿಜಾಪುರ, ಹಾವೇರಿ, ಧಾರವಾಡ ಇರಬಹುದು, ನಾವು ಆ ಭಾಗದಿಂದ ಬಂದವರು. ಇವತ್ತು ಫೆಬ್ರವರಿ 28ನೇ ತಾರೀಖು, ಈಗಾಗಲೇ ಟೆಸ್ಟ್ ಮಾಡಿ ತೆಗೆದುಕೊಳ್ಳುವವರಿಗೆ ಇವತ್ತು ಮುಧ್ಯಾಹ್ನದಿಂದ ಖರೀದಿಯನ್ನು ನಿಲ್ಲಿಸಬೇಕೆಂದು ಟೆಲಿಗ್ರಾಂ ಬಂದಿದೆ. ನನ್ನ ಕ್ಷೇತ್ರದಲ್ಲೆ 5 ಲಕ್ಷ ಕ್ವಿಂಟಾಲ್‌ಗಿಂತ ಹೆಚ್ಚಿಗೆ ಬೆಳೆಯನ್ನು ಬೆಳೆದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರಾದ ಯಾವಗಲ್‌ರವರು ಮಾತನಾಡುವುದಕ್ಕೆ ಅವಕಾಶ ಬಂದಾಗ ಮಾತನಾಡಲಿ, ಆದರೆ, ಇಲ್ಲಿ ಅವರ ನಡವಳಿಕೆಯ ಪ್ರಶ್ನೆ ಇದೆ, ಆ ಬಗ್ಗೆ ಅವರು ಹೇಳಲಿ ಆನಂತರ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡೋಣ. ಏಕೆಂದರೆ ನರಗುಂದ, ನವಲಗುಂದದ ಸಮಸ್ಯೆ ಮೂರು ತಿಂಗಳಿಂದ ಇದೆ, ಖರೀದಿ ಕೇಂದ್ರ ಪ್ರಾರಂಭವಾಗಿ ಮೂರು ತಿಂಗಳಾಯಿತು, ಇಲ್ಲಿಯವರೆಗೆ ರಾಜ್ಯ ಸರ್ಕಾರ ಏನು ಮಾಡುತ್ತಿದೆ, ರಾಜ್ಯ ಸರ್ಕಾರ 75 ಕೊಟಿ ರೂಪಾಯಿಗಳ ಖರೀದಿ ಮಾಡಿದ್ದು ಎಲ್ಲಿದೆ? ಇದರ ಬಗ್ಗೆ ಚರ್ಚೆ ಮಾಡೋಣ, ಬೆಳಗ್ಗಿನ ಘಟನೆಯ ಬಗ್ಗೆ ಅವರು ಹೇಳಲಿ.

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಈ ಸಮಸ್ಯೆಗೂ ಆಡಳಿತ ಪಕ್ಷಕ್ಕೂ ಮುಖ್ಯಮಂತ್ರಿಗಳಿಗೂ ಸಂಬಂಧವಿಲ್ಲ, ಅಧ್ಯಕ್ಷರೆ, ಪರಿಸ್ಥಿತಿಯನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು, ಇವತ್ತು ಖರೀದಿ ಮಾಡುವುದು ಬಂದ್ ಆಯಿತು ಇವತ್ತು ರೈತರ ಸಮಸ್ಯೆ ಬಹಳ ಗಂಭೀರವಾಗಿದ್ದು ಬಹಳ ಕಷ್ಟದಲ್ಲಿದ್ದಾರೆ.

ಅನೇಕ ಸಾವುಗಳು ಆಗುತ್ತಿವೆ. ಅಂಥ ಕಡೆಗಳಿಗೆ ತಾವೇ ಹೋಗಿ ಬರುತ್ತಿದ್ದೀರಿ. ಎರಡು ದಿವಸ ತಡವಾದರೆ ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗುತ್ತದೆ. ಸಾಕಷ್ಟು ತೊಂದರೆಗಳಾಗುತ್ತವೆ. ರಾಜಕೀಯವಾಗಿಯೂ ತೊಂದರೆಗಳಾಗುತ್ತವೆ, ಕಾಯಿದೆ ದೃಷ್ಟಿಯಿಂದಲೂ ತೊಂದರೆಗಳಾಗುತ್ತವೆ. ನಾವು ಇವತ್ತು ಮಾಡಿದ್ದು ನಮ್ಮ ತೀಟೆಗಾಗಿ ಅಥವಾ ಪ್ರಚಾರಕ್ಕಾಗಿ ಅಲ್ಲ. ನಮ್ಮ ಅನೇಕ ಸ್ನೇಹಿತರ ವಿಚಾರವೂ ಅದಲ್ಲ. ಆದರೆ, ಪರಿಸ್ಥಿತಿ ವಾಸ್ತವಿಕವಾಗಿ ಹಾಗೆ ಇದೆ. ಅದನ್ನು ಪ್ರಸ್ತಾಪ ಮಾಡಲು ತಮ್ಮ ಅನುಮತಿ ಕೇಳಿದ್ದೆವು, ತಾವೂ ಕೊಟ್ಟಿದ್ದಿರಿ. ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಲು ಪ್ರಯತ್ನ ಮಾಡಿದಾಗ ನಾನೂ ಸಹ ನನ್ನ ಕರ್ತವ್ಯವಾಗಿ, ನನ್ನ ಭಾಗದ ಜನರಿಗೆ ಅನುಕೂಲವಾಗಲಿ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಲು, ಈ ಮೂಲಕ ಕೇಂದ್ರ ಸರ್ಕಾರಕ್ಕೆ ತಿಳಿಸವ ಪ್ರಯತ್ನವನ್ನು ಮಾಡಿದ್ದೇನೆ. ಇದರಲ್ಲಿ ಅವರ ವಿಚಾರಕ್ಕೆ ಅಡ್ಡ ಬರುವುದಾಗಲೀ, ಅಥವಾ ಯಾರಿಗಾದರೂ ಅಗೌರವ ಮಾಡುವುದಾಗಲೀ ಇಲ್ಲ. ಆಥವಾ ಆಡಳಿತ ಪಕ್ಷದಿಂದ ಕುಮ್ಮಕ್ಕು ಇದೆ ಎಂದು ಇದನ್ನು ಮಾಡಿದ್ದಲ್ಲ. ಇದು ಗಂಭೀರವಾದ ಸಮಸ್ಯೆ. ಅದಕ್ಕಾಗಿ ಈ ಸಭೆ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲಿ, ಚರ್ಚೆ ಮಾಡಲಿ, ಕೊನೆಗೆ ಏನೋ ಒಂದು ತೀರ್ಪು ಮಾಡಿ ಏನೋ ಒಂದು ನಿರ್ಣಯ ಮಾಡಿ ಹೋಗುವುದಲ್ಲ. ಎಂಥ ಕ್ಷುಲ್ಲಕ ವಿಚಾರಗಳಿಗೆ ಈ ಸದನವನ್ನು ನಿಲ್ಲಿಸಲಾಗಿದೆ ಎಂದು ತಮಗೆ ಗೊತ್ತಿದೆ. ಲೋಕಸಭೆಯನ್ನು ವಾರಗಟ್ಟಲೆ ನಿಲ್ಲಿಸಿರುವುದನ್ನು ತಾವು ನೋಡಿದ್ದೀರಿ. ನಾವು ಇಲ್ಲಿ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದಕ್ಕೆ ತಾವು ಏನು ಶಿಕ್ಷೆ ಕೊಡುತ್ತೀರೋ ಅದನ್ನು ಒಪ್ಪಲು ನಾವು ತಯಾರಿದ್ದೇವೆ. ನಾವು ಅದನ್ನು ದುರುದ್ದೇಶದಿಂದ ಮಾಡಿದ್ದಲ್ಲ, ಸದುದ್ದೇಶದಿಂದ, ರೈತರ ಹಿತರಕ್ಷಣೆ ಮಾಡಲು ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಯಾವಗಲ್‌ರವರು ಹೇಳಿದರು, ಇದು ಗಂಭೀರವಾದ ವಿಷಯ, ತಮ್ಮ ಕೊಠಡಿಗೆ ಬಂದು ಇದನ್ನು ಪ್ರಸ್ತಾಪ ಮಾಡಲು ತಮ್ಮ ಅನುಮತಿ ಕೇಳಿದ್ದೆ, ತಾವು ಪ್ರಶ್ನೋತ್ತರ ವೇಳೆ ಆದನಂತರ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಿರಿ ಎಂದು ಹೇಳಿದರು. ಆದರೆ ಮೊದಲು ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ, ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬೇಕೋ ಎನ್ನುವುದು ತೀರ್ಮಾನವಾಗಿರಲಿಲ್ಲ. ಅದು ಇಲ್ಲಿ ತೀರ್ಮಾನವಾಗುವಂಥಾದ್ದು. ಪ್ರಶ್ನೋತ್ತರ ವೇಳೆ ಆದಮೇಲೆ ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದಿರಿ ಎಂದು ಅವರೇ ಒಪ್ಪಿಕೊಂಡಿದ್ದಾರೆ. ನಿಲುವಳಿ ಸೂಚನೆ ಬಗ್ಗೆ ನಾನು ಪಾಥಮಿಕವಾದ ಪ್ರಸ್ತಾಪವನ್ನು ಮಾಡಲು ಪ್ರಾಂಭಿಸಿದ ಹಂತದಲ್ಲಿ ಮಾನ್ಯ ಯಾವಗಲ್‌ರವರು ಮತ್ತು ಅವರ ಮಿತ್ರರು ಅಷ್ಟೊಂದು ಗಡಿಬಿಡಿಯಿಂದ ಸದನದ ಬಾವಿಗೆ ಏಕೆ ಬಂದರು ಎನ್ನುವುದು ಅರ್ಥವಾಗಲಿಲ್ಲ, ಅವರು ಏಕೆ ಆ ರೀತಿ ನಡವಳಿಕೆ ಮಾಡಿದರು ಎನ್ನುವುದು ಅರ್ಥವಾಗಲಿಲ್ಲ. ನಾವು ಇದರ ಬಗ್ಗೆ ಗಂಭೀರವಾಗಿ

ವಿಚಾರ ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿ ಇದ್ದರು. ಮಾನ್ಯ ಯಾವಗಲ್‌ರವರು ಈ ಸದನದ ಉಪಾಧ್ಯಕ್ಷರಾಗಿ ಕೆಲಸ ಮಾಡಿದಂಥವರು, ಈ ಸದನದ ನಡವಳಿಕೆಗಳು ಹೇಗಿರಬೇಕು ಎನ್ನುವುದು ಗೊತ್ತಿದ್ದಂಥ ವ್ಯಕ್ತಿಗಳು ಅವರು. ಅವರ ನೇತೃತ್ವದಲ್ಲಿ ಆಡಳಿತ ಪಕ್ಷದ ಸದಸ್ಯರು ಏಕೆ ಬಾವಿಯೊಳಗೆ ಬಂದರು ಎನ್ನುವುದು ಗೊತ್ತಾಗಲಿಲ್ಲ. ಅವರು ಓಡಿಬಂದರು.

ಅಧ್ಯಕ್ಷರು : ನೀವು ಪ್ರಶ್ನೆ ಕೇಳುವುದು, ಅದಕ್ಕೆ ಅವರು ಉತ್ತರ ಕೊಡುವುದು, ಅವರ ಪ್ರಶ್ನೆ, ನಿಮ್ಮ ಉತ್ತರ, ಆ ರೀತಿ ಆಗುವುದು ಬೇಕಾಗಿಲ್ಲ. ನಾವು ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. Let us close this chapter at this stage.

ಶ್ರೀ ಬಿ.ಆರ್. ಯಾವಗಲ್ : ತಾವು ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಲು ಪ್ರಯತ್ನ ಮಾಡಿದಾಗ ನಮಗೆ ಬೇರೆ ದಾರಿ ಇರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಈ ಘಟನೆಯ ಬಗ್ಗೆ, ನಡವಳಿಕೆ ಬಗ್ಗೆ ವಿಷಾದ ವ್ಯಕ್ತ ಪಡಿಸಬೇಕಾಗುತ್ತದೆ. ಬೆಳಿಗ್ಗೆ ನಾವು ಮಾತುಕತೆಯಾಡಿದಂಥ ಸಂಧರ್ಭದಲ್ಲಿ ಸರ್ಕಾರದ ಪರವಾಗಿ ಕಾನೂನು ಸಚಿವರು ವಿಷಾದ ವ್ಯಕ್ತಪಡಿಸುವ ಬಗ್ಗೆ ಹೇಳಿದರು. ಆದರೆ ಈಗ ಆ ಶಬ್ದ ಅವರ ಬಾಯಿಂದ ಬರುತ್ತಿಲ್ಲ. ತಮ್ಮ ಮುಂದೆ ಒಪ್ಪಿಕೊಂಡ ಅವರು, ಇದಕ್ಕೆ ಈಗ ಏಕೆ ಮುಜುಗರಪಡುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತಿಲ್ಲ. ಇದಕ್ಕೆ ಏನಾದರೊಂದು ಕೊನೆ ಹಾಡಬೇಕಾಗುತ್ತದೆ. ಏಕೆಂದರೆ ಚರ್ಚೆಗೆ ಮಹತ್ವ ಕೊಡಬೇಕಾಗುತ್ತದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಈ ವಿಷಯದ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ನಾವು ಬೇಡ ಎನ್ನುವುದಿಲ್ಲ, ಬೇಕಾದಷ್ಟು ಚರ್ಚೆಯಾಗಲಿ, ಚರ್ಚೆ ಮಾಡಲು ನಾವು ತಯಾರಿದ್ದೇವೆ.

(ಈ ಹಂತದಲ್ಲಿ ಸದಸ್ಯರಾದ ಕೆ. ಶ್ರೀನಿವಾಸಗೌಡರು ಮಾತನಾಡಲು ಪ್ರಯತ್ನಪಟ್ಟರು)

ಅಧ್ಯಕ್ಷರು : ಗೌಡರೇ ಬೇಡ. ನೀವು ಮಾತನಾಡಿದರೆ ಆನಂತರ 8- 10 ಜನ ಮಾತನಾಡುತ್ತಾರೆ, ಮಾತನಾಡಲು ಒಬ್ಬೊಬ್ಬರೇ ಎದ್ದೇಳುತ್ತಾರೆ. ಎರಡೂ ಕಡೆಯ ಮಾತುಗಳನ್ನು ನಾವು ಕೇಳಿದ್ದೇವೆ. ಬೆಳಿಗ್ಗೆಯಿಂದ ಸುಮ್ಮನೆ ಏನಾಕಾಲ ಸಮಯ ಕಳೆದಿದ್ದೇವೆ. ಇನ್ನು ಮುಂದೆ ಅದು ಬೇಡ.

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರದ ಪರವಾಗಿ ಉತ್ತರ ಬೇಕು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ಅವರು ಏನೂ ಮಾತನಾಡುತ್ತಿಲ್ಲ. ಈ ಘಟನೆ ನಡೆದಂಥ ಸಂದರ್ಭದಲ್ಲಿ ಅವರು ಇದ್ದರು.

ಅಧ್ಯಕ್ಷರು : ಪ್ರಾರಂಭದಲ್ಲೇ ಚಂದ್ರೇಗೌಡರು ಉತ್ತರ ಹೇಳಿದರಲ್ಲ. ಚಂದ್ರೇಗೌಡರೇ ತಾವು ಏನು ಹೇಳಿದಿರಿ, ಅದನ್ನು ಇನ್ನೊಂದು ಸಲ ರಿಪೀಟ್ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಎಲ್ಲರೂ ಒಟ್ಟಿಗೆ ಕುಳಿತು ಕೆಲಸ ಮಾಡೋಣ ಎಂದು ನಾನು ಅವರಿಗೆ ಪ್ರಾರಂಭದಲ್ಲೇ ಅಪೀಲ್ ಮಾಡಿದೆ. ಈಗ ಒಂದೆರಡು ವಿಚಾರಗಳನ್ನು ಅವರು ಕೇಳಿದ್ದಾರೆ. ನಾನು ಯಾವಾಗಲೂ ಹೇಳುತ್ತೇನೆ, The adjournment motion takes

precedence over all other matters. ತಾವು ನಿಲುವಳಿ ಸೂಚನೆ ತಂದಿದ್ದೀರಿ. ಅದರಲ್ಲಿ ಪ್ರಾಮುಖ್ಯತೆ ಇದೆ ಎನ್ನುವುದು ನಮಗೆ ಅರ್ಥವಾಗಿದೆ. ಚರ್ಚೆಗೆ ಸರ್ಕಾರದ ಸಿದ್ಧವಿದೆ ಎಂದು ಹೇಳಿದ್ದೇನೆ. ಈಗಲೂ ಸಿದ್ಧವಿದೆ, ಬೆಳಿಗ್ಗೆಯೂ ಸಿದ್ಧವಿತ್ತು ಆದರೆ ಇದ್ದಂಥ ಒಂದೇ ಒಂದು ಸಣ್ಣ ಸಮಸ್ಯೆ ಎಂದರೆ, ಪ್ರಶ್ನೋತ್ತರವನ್ನು ಸ್ಥಗಿತಗೊಳಿಸಿ ಚರ್ಚೆಯನ್ನು ಆರಂಭ ಮಾಡಬೇಕೆ ಅಥವಾ ಪ್ರಶ್ನೋತ್ತರ ಮುಗಿದ ಮೇಲೆ ಪ್ರಾಂಭ ಮಾಡಬೇಕೆ ಎನ್ನುವುದು ಸಮಸ್ಯೆಯಾಗಿತ್ತು. ಖರೀದಿ ಕೇಂದ್ರಗಳು ಮುಚ್ಚಿ ಹೋಗುವುದರಿಂದ ನಮ್ಮ ಭಾಗದ ಜನಗಳಿಗೆ ತೊಂದರೆಯಾಗುತ್ತದೆ ಎಂದು ಈ ಭಾಗದ ಸದಸ್ಯರು, ಅದನ್ನು ಪ್ರಸ್ತಾಪ ಮಾಡಲು ನಮಗೆ ಅವಕಾಶ ಕೊಡಿ, ಸಾಧ್ಯವಾದರೆ ಇಲ್ಲಿ ಒಂದು ಠರಾವು ಮಂಡನೆ ಮಾಡೋಣ, ಎಲ್ಲರೂ ಒಟ್ಟಾಗಿ ಸೇರಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡೋಣ, ಖರೀದಿ ಕೇಂದ್ರಗಳನ್ನು ಏಪ್ರಿಲ್ ಕೊನೆಯವರೆಗೆ ಮುಂದುವರೆಸಿ ಎಂದು ಕೇಳೋಣ ಎಂದು ಇದ್ದರು. ಇದರಲ್ಲಿ ಚರ್ಚೆಗೆ ಅಡ್ಡಿಪಡಿಸಬೇಕು ಎಂದಾಗಲೀ, ಗಡಿಬಿಡಿಯಿಂದ ಬಾವಿಗೆ ಬಂದಿದ್ದಾಗಲೀ, ಸದನಕ್ಕೆ ಅಗೌರವ ಮಾಡತಕ್ಕಂಥ ವಿಚಾರವಾಗಲೀ ಅಥವಾ ಖಂಡಿಸತಕ್ಕ ವಿಚಾರವಾಗಲೀ ಇದರಲ್ಲಿ ಇರಲಿಲ್ಲ. ನಮಗಿರತಕ್ಕಂಥ ನೋವನ್ನು ಸಾಧ್ಯವಾದಷ್ಟು ಬೇಗ ಹೇಳಬೇಕು, ಸದನದ ಗಮನಕ್ಕೆ ತರಬೇಕು, ತನ್ಮೂಲಕ ಎರಡೂ ಸರ್ಕಾರಗಳಿಗೆ ಮನವಿ ಮಾಡಬೇಕು ಎನ್ನುವ ಸದಿಚ್ಛೆಯಿಂದ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ಇಟ್ಟುಕೊಳ್ಳಬಾರದು. ನಮಗೆ ಪ್ರತಿಷ್ಠೆ ಇರತಕ್ಕಂಥಾದ್ದು ರೈತರ ಸಮಸ್ಯೆ. ಆ ಸಮಸ್ಯೆಯ ಬಗ್ಗೆ ಚರ್ಚೆ ಮಾಡೋಣ. ಅದಕ್ಕಾಗಿ ನಾವು ಈ ಪ್ರತಿಷ್ಠೆಯ ಮೇಲೆ ನಿಲ್ಲುವುದು ಬೇಡ ಎಂದು ಹೇಳುತ್ತೇನೆ. ನಾನು ಮತ್ತೂ ಮುಂದಕ್ಕೆ ಹೋಗಿ ಒಂದು ಮಾತನ್ನು ಹೇಳಿದೆ, ತಾವು ನಿರ್ಣಯಿಸುವುದಾದರೆ ಪ್ರಶ್ನೋತ್ತರವನ್ನು ಸ್ಥಗಿತಗೊಳಿಸಿ ಚರ್ಚೆಗೆ ತೆಗೆದುಕೊಳ್ಳಬಹುದು ಸರ್ಕಾರವೂ ಚರ್ಚೆಗೆ ಸಿದ್ಧವಿದೆ, ನಮಗೂ ಚರ್ಚೆಯ ಅವಶ್ಯಕತೆ ಇದೆ, ಯಾವ ಯಾವ ಸರ್ಕಾರದಿಂದ ಏನೇನು ಆಗಬೇಕು ಎನ್ನತಕ್ಕಂಥಾದ್ದನ್ನು ನಿರ್ಣಯ ಮಾಡೋಣ ಎನ್ನುವ ಮಾತನ್ನು ಹೇಳಿದೆ. ಜೊತೆಗೆ, ಒಂದು ವೇಳೆ ಆಳುವ ಪಕ್ಷದ ಸದಸ್ಯರಿಂದ ಆವೇಶದಲ್ಲಿ ಏನೋ ನಡೆದು ಹೋಯಿತು ಎನ್ನುವ ಭಾವನೆ ಇದ್ದರೆ ಅದನ್ನು ಬಿಟ್ಟುಬಿಡಿ. ವಿಷಯದ ಗಂಭೀರ್ಯವನ್ನು ಗಮನದಲ್ಲಿಟ್ಟುಕೊಂಡು ಸದನದಲ್ಲಿ ನಡೆದಂಥ ಸಣ್ಣಪುಟ್ಟ ಘಟನೆಗಳನ್ನು ಮರೆತು ಜನಪ್ರತಿನಿಧಿಗಳಾದ ನಾವೆಲ್ಲಾ ಕುಳಿತು ಕೆಲಸ ಮಾಡೋಣ ಎಂದು ನಾನು ಅವರಲ್ಲಿ ಮನವಿ ಮಾಡಿದ್ದೇನೆ. ಮತ್ತೊಮ್ಮೆ ಮನವಿ ಮಾಡುತ್ತೇನೆ, ದಯಮಾಡಿ ತಾವು ಈ ವಿಚಾರದಲ್ಲಿ ದೊಡ್ಡ ಮನಸ್ಸು ಮಾಡಬೇಕು. ನಾವು ಕೆಲಸ ಪ್ರಾರಂಭ ಮಾಡೋಣ. ಇಡೀ ದಿವಸ ಯಾವುದೇ ಕಲಾಪ ನಡೆದಿಲ್ಲ, ನಿನ್ನೆ ಕೂಡ ಸಭೆ ಮುಂದಕ್ಕೆ ಹೋಗಿದೆ, ಇವತ್ತು ಕೂಡ ಚರ್ಚೆ ಮಾಡದೇ ಅಥವಾ ವಿಷಯಗಳನ್ನು ಪ್ರಸ್ತಾಪ ಮಾಡದೇ ಮುಂದಕ್ಕೆ ಹೋಗುವುದು ಸರಿ ಕಾಣುವುದಿಲ್ಲ. 'ಜನ ನಮ್ಮನ್ನು ನೋಡಿ ಏನು ಅಂದುಕೊಳ್ಳುತ್ತಾರೆ' ಎಂದು ನೀವೇ ಹೇಳುತ್ತೀರಿ. ಮಾನ್ಯ ಸಿಂಧ್ಯಾರವರು, ಇದು ಪುರಸಭೆಯೋ, ಪಂಚಾಯಿತಿಯೋ ಆದಹಾಗೆ ಆಗಿಬಿಟ್ಟಿದೆ ಎಂದು ಹೇಳಿದರು. ಆದರೆ ಪುರಸಭೆಯವರು, ಪಂಚಾಯಿತಿಯವರು ಅಲ್ಲಿ ಹೇಳುತ್ತಾರೆ ಎಂದರೆ, ಇದೇನು ಅಸೆಂಬ್ಲಿಯೇ, ಇಲ್ಲಿ ಏಕೆ ಇಷ್ಟೊಂದು ಗಲಾಟೆ ಮಾಡುತ್ತೀರಿ ಎಂದು ಅವರು ಹೇಳುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, I am on a point of order. ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬೇಕು ಎಂದು ಆ ರೀತಿ ಮಾಡಿದೆವು ಎಂದು ಸಚಿವರಾದ ಮಾನ್ಯ ಚಂದ್ರೇಗೌಡರು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರಿಂದ ಸೇರಿ ಒತ್ತಾಯ

ಮಾಡೋಣ ಎಂದು ಆ ಪಕ್ಷದವರು ಮೋಷನ್ ತರಬಹುದಾಗಿತ್ತು. They can bring a separate motion. ನಾವು ಅಷ್ಟೇ ಒತ್ತಾಯದಿಂದ ಎಲ್ಲರೂ ಸೇರಿ ಒತ್ತಾಯ ಮಾಡೋಣ ಎಂದು ಹೇಳುವಂಥಾದ್ದು, when the opposition has moved an adjournment motion on a particular issue, it is not correct for the Law Minister to defend this..

ಶ್ರೀ ಡಿ.ಬಿ. ಚಂದ್ರೇಗೌಡ : ಬಹುಶಃ ತಮಗೆ ಮಾಹಿತಿ ಇಲ್ಲ. ಮಾಹಿತಿ ಏನೆಂದರೆ, ಇವರು ಒಂದು ಪ್ರಸ್ತಾವ ಕಳುಹಿಸಿದ್ದಾರೆ. ಆದರೆ ಆಡಳಿತ ಪಕ್ಷದಲ್ಲಿರುವವರಿಗೆ ಇನ್ನೊಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಲು ಆಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ There is no bar for any of them to move the motion against the Central Government.

ಶ್ರೀ ಡಿ.ಬಿ. ಚಂದ್ರೇಗೌಡ : ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿ, ಆ ಬಗ್ಗೆ ಸಭಾಧ್ಯಕ್ಷರ ಕೊಠಡಿಯಲ್ಲಿ ಚರ್ಚೆಯಾಗಿ ಆಮೇಲೆ ಇಲ್ಲಿ ಕೇಳಿದರು.

+ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುವಾಗ ಅವರಿಗೆ ಗೌರವ ಕೊಡದಿದ್ದರೆ, ಆ ಸ್ಥಾನಕ್ಕೆ ಅಗೌರವ ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ದಯಮಾಡಿ ಈ ಸಂಪ್ರದಾಯ ಇನ್ನು ಮುಂದೆ ಆಗಬಾರದು. ಇದು ಬಹಳ ಕೆಟ್ಟ ಸಂಪ್ರದಾಯ. ವಿರೋಧ ಪಕ್ಷದ ನಾಯಕರು ಕೇಳಿಕೊಂಡಾಗ ತಾವು ಅದಕ್ಕೆ ಅವಕಾಶ ಕೊಟ್ಟಿದ್ದಿರಿ. ತಮ್ಮ ಅಧಿಕಾರವನ್ನು ಮೊಟಕು ಮಾಡಲು ಗಲಾಟೆ ಮಾಡಿದ್ದು ಒಳ್ಳೆಯ ಸಂಪ್ರದಾಯವಲ್ಲ.

3.40 ಪಿ.ಎಂ.

ಅಧ್ಯಕ್ಷರು : ಎರಡೂ ಕಡೆಯಿಂದ ತಾವುಗಳೆಲ್ಲ ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಇದು ಆಗಬಾರದು, ಆಗಿಹೋಯಿತೆಂದು ಇಟ್ಟುಕೊಳ್ಳೋಣ. ಜೊತೆಗೆ ಶ್ರೀಮಾನ್ ಚಂದ್ರೇಗೌಡರು ಹೇಳಿದ ಹಾಗೆ ಆವೇಶ ಎನ್ನುವುದು ಏನಿದೆ, ಆವೇಶ ಎನ್ನುವುದು ಬಹುಶಃ ಆಡಳಿತ ಸದಸ್ಯರು ಮೆಕ್ಕೆಜೋಳದ ಬಗ್ಗೆ ಮಾತನಾಡದಿದ್ದರೆ ನಾಳೆಯ ದಿವಸ ಅವರೆಲ್ಲ ಅವರವರ ಕ್ಷೇತ್ರದಲ್ಲಿ ಮುಖ ತೋರಿಸಬೇಕಲ್ಲವೇ? ವಿರೋಧ ಪಕ್ಷದ ಕಡೆಯಿಂದ ಅನೇಕ ಸಲ ಆವೇಶದಿಂದ ಬಂದಿದ್ದಾರೆ. ಆಡಳಿತ ಪಕ್ಷದ ಕಡೆಯಿಂದ ಹತ್ತು ವರ್ಷಕ್ಕೋ ಹದಿನೈದು ವರ್ಷಕ್ಕೋ ಒಂದು ಸಲ ಅಂದರೆ ಇವತ್ತು ಒಂದು ದಿವಸ ಆವೇಶದಲ್ಲಿ ಬಂದಿದ್ದಾರೆ. ಇದನ್ನು ಒಂದೆಡೆ ಇಟ್ಟುಕೊಳ್ಳೋಣ. ಅದರ ಬಗ್ಗೆ ಶ್ರೀಮಾನ್ ಚಂದ್ರೇಗೌಡರು ವಿಷಾದ ವ್ಯಕ್ತಪಡಿಸದೇ ಇದ್ದರೂ ಸಹ ' ಈ ರೀತಿ ರಿಪೀಟ್ ಆಗದ ಹಾಗೆ ನೋಡಿಕೊಳ್ಳುತ್ತೇವೆ' ಎಂದು ಆಗಲೇ ಒಂದು ಸಲ ಹೇಳಿದ್ದಾರೆ. ಎರಡನೇ ಸಲವಾದರೂ ನಾವು ಅದನ್ನು ರಿಪೀಟ್ ಮಾಡಿ ಹೇಳುತ್ತೇವೆಂದು ಹೇಳಿದ ಮೇಲೆ ಈ ವಿಷಯವನ್ನು ಅಲ್ಲಿಗೆ ದಯವಿಟ್ಟು ಸ್ಟಾಪ್ ಮಾಡೋಣ.

(ಗೊಂದಲ)

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ನಮ್ಮನ್ನು ಭಕ್ಷಣೆ ಮಾಡಲಿಕ್ಕೆ ನೋಡುತ್ತಿದ್ದಾರೆ, ನೀವು ನಮ್ಮ ರಕ್ಷಕರು, ನೀವಾದರೂ ನಮ್ಮ ರಕ್ಷಣೆಗೆ ಬರದಿದ್ದರೆ ನಾವು ಏನು ಮಾಡುವುದು? ನಾನು ಇಲ್ಲಿ ಎರಡು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ದಯವಿಟ್ಟು ನಾನು ಹೇಳುವುದನ್ನು ತಾಳ್ಮೆಯಿಂದ ಕೇಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಬೆಳಿಗ್ಗೆ ಸದನದಲ್ಲಿ ನಡೆದಂಥ ಘಟನೆ ಏನಿದೆ. ಅದು ಸಂಸದೀಯ ನಡವಳಿಕೆಗೆ ಅರ್ಹವಾದುದೇ ಅಥವಾ ಇಲ್ಲವೇ ಎನ್ನುವ ತೀರ್ಮಾನಕ್ಕೆ ಬರಬೇಕು. 'ಇಲ್ಲಿ ಒಂದು ಸಣ್ಣಪುಟ್ಟ ಘಟನೆ ಆಗಿಹೋಗಿದೆ' ಎಂದು ಮಾನ್ಯ ಸಂಸದೀಯ ಸಚಿವರು ಇಲ್ಲಿ ಉಲ್ಲೇಖ ಮಾಡಿದರು. ಸಣ್ಣಪುಟ್ಟ ಘಟನೆ ಆಗಿಹೋಗುವಂಥದ್ದು ಸ್ವಾಭಾವಿಕ ಎನ್ನುವಂಥದ್ದು ನಮಗೆಲ್ಲ ಗೊತ್ತಿದೆ. ಆದರೆ ಇದೇ ರೀತಿ ದಿನನಿತ್ಯವೂ ಸಣ್ಣಪುಟ್ಟ ಘಟನೆ ಆಗಲಿಕ್ಕೆ ಸಾಧ್ಯತೆ ಇರಬೇಯೇ? ಇದನ್ನು ನಾವು ಆಲೋಚನೆ ಮಾಡಬೇಕು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಶ್ರೀ ಚಂದ್ರೇಗೌಡರು, ಶ್ರೀ ರಂಗನಾಥ್ ಅವರಂಥ ಹಿರಿಯ ಸದಸ್ಯರೆಲ್ಲರೂ ಸದನದಲ್ಲಿ ಉಪಸ್ಥಿತರಿದ್ದರು. ಆಡಳಿತ ಪಕ್ಷದ ಕಡೆಯಿಂದ ಏಕಾಏಕಿ ಕೆಲವು ಸದಸ್ಯರು ಗಲಾಟೆ ಮಾಡಿಕೊಂಡು ಬಾವಿ ಕಡೆ ಬರುವಾದ, ಮೇಲೆ ಹೇಳಿದಂಥ ಮಾನ್ಯ ಹಿರಿಯ ಸದಸ್ಯರುಗಳು ಇದ್ದರೂ ಕೂಡ -'ಇದು ಸರಿಯಲ್ಲ, ಪ್ರಸ್ತಾಪಮಾಡಲಿಕ್ಕೆ ನೀವು ನಿಮ್ಮ ಸ್ಥಾನಗಳಿಗೆ ಹೋಗಿ' ಎನ್ನುವ ಮಾತನ್ನು ಸೌಜನ್ಯಕ್ಕಾದರೂ ಇವರ್ಯಾರೂ ಹೇಳಲಿಲ್ಲ. ಮಾನ್ಯ ಅಧ್ಯಕ್ಷರಾದ ತಾವು ಪೀಠದಲ್ಲಿ ಕುಳಿತುಕೊಂಡು ಇದನ್ನೆಲ್ಲ ನೋಡುತ್ತಿದ್ದೀರಿ. ನಾವು ಈ ಸದನಕ್ಕೆ ಹೊಸಬರು ಇರಬಹುದು ಅಥವಾ ಈ ಸಂಸದೀಯ ನಡವಳಿಕೆಯಲ್ಲಿ ಸ್ವಲ್ಪ ತಿಳಿಯದವರು ಇರಬಹುದು. ಆದರೆ ಹಿರಿಯ ವ್ಯಕ್ತಿಗಳು ಸಂಸದೀಯ ನಡವಳಿಕೆಗೆ ಅಪಚಾರವಾಗುತ್ತದೆಂದು ಹೇಳುವಂಥ ಸಂದರ್ಭ ಆದಾಗ ಕೂಡ ಯಾವುದೇ ರೀತಿಯ ಒಂದು ಸೌಜನ್ಯದ ಮಾತು ಅವರ ಕಡೆಯಿಂದ ಬರದೇ ಇದ್ದುದನ್ನು ನೋಡಿದರೆ, ಇದು ಅವರ ಪ್ರಚೋದನೆಯಿಂದ ಆಗಿದೆ ಎಂದು ನಾವು ಹೇಳಬೇಕಾಗುತ್ತದೆ. ಆ ರೀತಿ ಪ್ರಚೋದನೆ ಮಾಡಿಲ್ಲ ಎಂದಾಗಿದ್ದರೆ 'ಈ ರೀತಿ ಆಗಬೇಕೆಂದು' ಖಂಡಿತವಾಗಿ ಅವರು ಹೇಳುತ್ತಿದ್ದರು. ನಾನು ವಿಧಾನಸಭೆಗೆ ಎರಡನೇ ಅವಧಿಯಲ್ಲಿ ಬರುತ್ತಿದ್ದೇನೆ. ಇಷ್ಟರತನಕ ಯಾವುದೇ ಸಂದರ್ಭದಲ್ಲಿ ಆಡಳಿತ ಪಕ್ಷದಿಂದ ಬಾವಿಗೆ ಬಂದು ಗಲಾಟೆ ಮಾಡಿರುವುದು ನನಗೆ ಗೊತ್ತಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಪ್ರಚೋದನೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರೆ : ಮಾನ್ಯ ಸದಸ್ಯರಾದ ನೀಲಕಂಠಪ್ಪನವರು ದಯವಿಟ್ಟು ಕುಳಿತುಕೊಳ್ಳಬೇಕು ತಾವು ಒಬ್ಬರಿಗೊಬ್ಬರು ಮಾತನಾಡುತ್ತಾ ಇದ್ದರೆ ಯಾರು ಯಾರಿಗೇನೂ ಕಡಿಮೆ ಇಲ್ಲ. ಎರಡೂ ಕಡೆಯವರು ಕಡಿಮೆ ಏನೂ ಇಲ್ಲ. ನಾವು ಸಾಧ್ಯವಾದಷ್ಟೂ ಇಂಥ ನಡವಳಿಕೆಗಳನ್ನು ಕಡಿಮೆ ಮಾಡಿಕೊಂಡು ನಾವು ಕೆಲಸ ಮುಂದುವರಿಸಿದರೆ ಜನತೆ ನಿಮ್ಮೆಲ್ಲರನ್ನು ಮೆಚ್ಚುತ್ತಾರೆ. ಸುಮ್ಮನೆ ಇಲ್ಲಿ ನಾವು ನಾವೇ ಜಗಳವಾಡಿಕೊಂಡು ಅವರು ಹೀಗೆ ಹೇಳಿದರು ಹಾಗೆ ಹೇಳಿದರು ಎಂದು ಇದ್ದರೆ ಇದರಿಂದ ಪ್ರಯೋಜನ ಏನು ಬಂತು? ಶ್ರೀ ಸದಾನಂದಗೌಡ ತಾವು ಮುಂದುವರಿಸಿ, ಬೇಗ ಮುಗಿಸಿಬಿಡಿ.

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ : ಸದಸ್ಯರಿಗೆ ಯಾರಿಗೂ ತಿಳುವಳಿಕೆ ಇಲ್ಲ ಸಂಸದೀಯ ನಡವಳಿಕೆ ಬಗ್ಗೆ ಅರಿವು ಇಲ್ಲ ಎಂದು ಹೇಳುತ್ತಿದ್ದಾರೆ. ನನಗೆ ಅರಿವು ಇಲ್ಲ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಆ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಡಿ.ವಿ. ಸದಾನಂದಗೌಡ : ಇನ್ನೇನು ಹೇಳಬೇಕು ಮಾನ್ಯ ಅಧ್ಯಕ್ಷರೆ? ಆಯಿತು, ಇದು ಬದಿಗೆ ಇರಲಿ. ಇನ್ನು ವಿಷಯಕ್ಕೆ ಬರುವುದಾದರೆ, ಇದನ್ನು ಭಾರೀ ಉದ್ದ ಎಳೆದುಕೊಂಡು ಹೋಗಬೇಕು, ಇದರಿಂದಾಗಿ ಈ ಸಭೆಯ ನಡವಳಿಕೆಗಳನ್ನು ಮೊಟಕುಗೊಳಿಸಬೇಕು ಎನ್ನುವ ಉದ್ದೇಶ ನಮಗೆ ಇಲ್ಲವೇ ಇಲ್ಲ. ಈ ಸಮಸ್ಯೆ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಆಗಬೇಕು ಚರ್ಚೆ ಆಗಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಆದರೆ ಸದನದಲ್ಲಿ ಈ ರೀತಿ ಒಂದು ತಪ್ಪು ನಡವಳಿಕೆ ನಡೆದಿದೆ, ಇದರ ತಪ್ಪು-ಒಪ್ಪುಗಳ ಬಗ್ಗೆ ವಿಚಾರ ವಿಮರ್ಶೆ ಮಾಡಿಕೊಂಡಾಗ ಕೂಡ, ಇದು ತಪ್ಪು ಎಂದು ಎಲ್ಲರಿಗೂ ಗೊತ್ತಾದ ಮೇಲೂ ಕೂಡ ಆ ತಪ್ಪಿನ ಬಗ್ಗೆ ವಿಷಾದ ವ್ಯಕ್ತಪಡಿಸುವಂಥ ಒಂದು ವ್ಯವಸ್ಥೆ ನಮ್ಮ ಸಮಾಜದಲ್ಲಿ ಇಲ್ಲ ಎಂದು ಹೇಳುವುದಾದರೆ ಇದು ಬಹಳ ದುಃಖಕರ ಸಂಗತಿಯಾಗಿದೆ. ತಮ್ಮ ಪಕ್ಷವೇ ಆಡಳಿತದಲ್ಲಿರುವಾಗ ಆಡಳಿತ ಪಕ್ಷದ ಸದಸ್ಯರು ಸಂಬಂಧಪಟ್ಟವರ ಹತ್ತಿರ ಹೋಗಿ ಕೆಲಸ ಮಾಡಿಸಿಕೊಳ್ಳಬಹುದಾಗಿತ್ತು. ಮತ್ತು ಆಡಳಿತ ಪಕ್ಷ ಆ ಸದಸ್ಯರುಗಳ ಕೆಲಸವನ್ನು ಮಾಡಬೇಕಾಗಿತ್ತು ಆದರೆ ಮಾಡಲಿಲ್ಲ. 'ಅವರ ಭಾಗದಲ್ಲಿ ಬೆಳೆದಿರುವಂಥ ಮೆಕ್ಕೆಜೋಳವನ್ನು ಖರೀದಿ ಮಾಡುವ ಸಲುವಾಗಿ ಅವರ ಮನಸ್ಸಿನಲ್ಲಿ ಆತಂಕ ಇದೆ' ಎಂದು ತಾವೇ ಉಲ್ಲೇಖ ಮಾಡಿದಿರಿ. ಸ್ವಾಮಿ, ಅವರಿಗಿಂತ ಹೆಚ್ಚಿನ ಆತಂಕ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇದೆ. ಆದ್ದರಿಂದಲೇ, ನಿನ್ನೆಯ ದಿವಸ ನಮ್ಮ ರಾಜ್ಯದ ಮಾನ್ಯ ಆಹಾರ ಮಂತ್ರಿಗಳು ನಮ್ಮ ನಾಯಕರಿಗೆ ಮೆಕ್ಕೆಜೋಳ ಖರೀದಿ ವಿಚಾರದ ಬಗ್ಗೆ ತಿಳಿಸಿದಾಗ, ಕೇಂದ್ರಸರ್ಕಾರದ ಆಹಾರಮಂತ್ರಿಗಳಾದ ಶ್ರೀ ಶಾಂತಕುಮಾರ್ ಅವರ ಜೊತೆ ನಮ್ಮ ನಾಯಕರು ನೇರವಾಗಿ ಸಂಪರ್ಕ ಮಾಡಿದಾಗ ಪರಿಶೀಲನೆ ಮಾಡಿ ಇದನ್ನು ಮುಂದುವರಿಸಲಿಕ್ಕೆ ಎಲ್ಲಾ ಒಪ್ಪಿಗೆಯನ್ನು ಕೊಡುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ ಅದನ್ನು ಮಾನ್ಯ ಆಡಳಿತ ಪಕ್ಷದ ಸದಸ್ಯರೆಲ್ಲ ಗಮನಿಸಬೇಕು. ಈ ವಿಚಾರಗಳು ಆ ಭಾಗಕ್ಕೆ ತಿಳಿದಿದ್ದಾಗ್ಯೂ ಕೂಡ ಇವತ್ತು ಇದನ್ನು ರಾಜಕೀಯ ಗಿಮಿಕ್ಸ್ ಮಾಡಬೇಕೆಂದು ಹೊರಟಿದ್ದಾರೆ. ನಾವು ಇಲ್ಲಿ ತಂದಂಥ ಈ ನಿಲುವಳಿ ಸೂಚನೆ ಸಂದರ್ಭದಲ್ಲಿ ಈ ಸರ್ಕಾರದ ಎಲ್ಲಾ ವಿಚಾರಗಳನ್ನು ಬಯಲು ಮಾಡುತ್ತಾರೆ, ಮತ್ತು ರಾಜ್ಯಸರ್ಕಾರದ ನಿಷ್ಕ್ರಿಯತೆ ಗೊತ್ತಾಗುತ್ತದೆ, ಇದು ಗೊತ್ತಾಗದ ಹಾಗೆ ಏನು ಮಾಡಬೇಕು? ಇದು ಗೊತ್ತಾಗದ ಹಾಗೆ ಒಂದು ದೊಡ್ಡ ರಾಜಕೀಯ ಗಿಮಕ್ಸ್ ಮಾಡಬೇಕೆಂದು ಹೇಳುವುದಕ್ಕೆ ಬೇಕಾಗಿ ನಾವು ಇಲ್ಲಿ ನಿಲುವಳಿ ಸೂಚನೆಯನ್ನು ತಂದಂಥ ಸಂದರ್ಭದಲ್ಲಿ ಆಡಳಿತ ಪಕ್ಷದವರು ಮಾಡಿದಂಥ ಕೆಲಸ ಅಲ್ಲವೇ? ಸರ್, ಇದು ಅವರು ತಮ್ಮ ಸ್ಥಾನಕ್ಕೆ ಗೌರವ ಕೊಟ್ಟಿದ್ದಾರೆಯೇ? ತಮ್ಮಲ್ಲಿ ಅವರು ಇದನ್ನು ಮೊದಲೇ ಪ್ರಶ್ನೆ ಮಾಡಿದ್ದಾರೆಯೇ? ಹೀಗೆಲ್ಲ ಇದ್ದರೂ ಕೂಡ ತಾವು ಇದನ್ನು ಅಷ್ಟು ಲಘುವಾಗಿ ಸ್ವೀಕಾರ ಮಾಡಬಾರದೆಂದು ನಮ್ಮ ವಿನಂತಿ. ಏಕೆಂದರೆ ಇದೇ ಸಂಪ್ರದಾಯ ನಾಳೆ, ಮುಂದೆಯೂ ನಡೆಯುತ್ತದೆ, ನಡೆಯಬಹುದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನನಗೆ ಆಶ್ಚರ್ಯವಾಗತಕ್ಕಂಥದ್ದು ಏನೆಂದರೆ, ಇಷ್ಟೆಲ್ಲಾ ಬೆಳಗ್ಗೆಯಿಂದ ಸದನದಲ್ಲಿ ನಡೆದಿದೆ, 'ಆಯಿತು, ಇದು ಒಂದು ಆಗಿದಕ್ಕೆ ವಿಷಯವನ್ನು ವ್ಯಕ್ತಪಡಿಸುತ್ತೇನೆ' ಎನ್ನುವ ಸೌಜನ್ಯವನ್ನೂ ಸಹ ಮಾನ್ಯ ಮಂತ್ರಿಗಳಿಂದ ತೋರಿಸುವುದಕ್ಕಾಗುತ್ತಿಲ್ಲ. 'ನಾವು ಇಲ್ಲಿಂದ ಎದ್ದುಹೋಗಿಬಿಡುತ್ತೇನೆ, ತಾವೇ ಸಭೆ ನಡೆಸಿಕೊಳ್ಳಿ' ಎಂದು ತಾವು ಹೇಳುತ್ತಿದ್ದೀರಿ. ನಾವು ನಿಮಗೆ ಬಹಳ ಸೌಜನ್ಯತೆಯಿಂದ ಎಲ್ಲಾ ತರಹದ ಸಹಕಾರವನ್ನು ಕೊಡುತ್ತಿದ್ದೇವೆ. ಆಡಳಿತ ಪಕ್ಷದ ಸದಸ್ಯರು ದಾಳಿ ಮಾಡಿದವರು. ತಾವು ನಮ್ಮ ಮೇಲೆ ಕೋಪಿಸಿಕೊಂಡು ಎದ್ದು ಹೋಗಿಬಿಡುತ್ತೇನೆಂದು. ಹೇಳಿದರೆ ಹೇಗೆ?

ಅಧ್ಯಕ್ಷರು : ಒಂದ್ನಿಮಿಷ, ಅಧ್ಯಕ್ಷರು ಮಾತನಾಡುವಾಗ ಡಿಸ್ಟರ್ಬ್ ಮಾಡಬೇಡಿ ಎಂದು ಹೇಳಿದೆ ಅಷ್ಟೆ, ಇನ್ನು ಏನೂ ಇಲ್ಲ. ಬೆಳಿಗ್ಗೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಹೀಗೆ ಎರಡೂ ಕಡೆಯವರು ಡಿಸ್ಟರ್ಬ್ ಮಾಡಿದರು.

ಶ್ರೀ ಡಿ.ವಿ. ಸದಾನಂದಗೌಡ : ತಾವು ಒಂದು ವಿಚಾರವನ್ನು ಇಲ್ಲಿ ಆಲೋಚನೆ ಮಾಡಬೇಕು. ಇಷ್ಟು ಗಂಭೀರವಾದ ವಿಚಾರವಾದ ಈ ಸಂಸದೀಯ ನಡವಳಿಕೆ ಬಗ್ಗೆ ನಾವು ಇಲ್ಲಿ ಎಲ್ಲಾ ವಿಚಾರಗಳನ್ನು ಮಾಡುತ್ತಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲು ಎದ್ದುನಿಂತಾಗ ಅವರಿಗೂ ಮಾತನಾಡುವುದಕ್ಕೆ ಆಗದ ರೀತಿಯಲ್ಲಿ ಗಲಾಟೆ ಮಾಡಿ ಅವರಿಗೂ ಅಗೌರವ ತೋರಿಸಿದ್ದಾರೆ. ಮಾನ್ಯ ಸಭಾನಾಯಕರು ಆ ಸಂದರ್ಭದಲ್ಲಿ ಸದನದಲ್ಲಿ ಇದ್ದರು. 'ತಾವೇ ಒಂದು ಮಾತು ಹೇಳಿ ಸೌಜನ್ಯಕ್ಕಾದರೂ ' ಎಂದು ಹೇಳಿದರೆ, ನಾವು ಇಷ್ಟೆಲ್ಲಾ ಮಾತನಾಡುತ್ತಿದ್ದ ಹಾಗೆ ಎದ್ದು ಹೊರಟುಹೋಗಿಬಿಟ್ಟರು. ಇದನ್ನೆಲ್ಲ ಮಾನ್ಯ ಅಧ್ಯಕ್ಷರಾದ ತಾವು ನೋಡಬೇಕಾಗುತ್ತದೆ. ಏಕೆಂದರೆ ವಿರೋಧಪಕ್ಷದವರನ್ನು ಎಷ್ಟು ಕಡೆಗಣಿಸುತ್ತಾರೆ ಎನ್ನುವಂಥದ್ದನ್ನು ತಾವು ಆಲೋಚನೆ ಮಾಡಬೇಕು. ನಾನು ಆಗ ನೋಡುತ್ತಿದ್ದಾಗ ಆ ಕಡೆ ಮಾನ್ಯ ಸಭಾನಾಯಕರು ಮತ್ತು ಮಾನ್ಯ ಗೃಹಸಚಿವರು ಈ ಘಟನೆ ಆದನಂತರ ಗಹಗಹಿಸಿ ನಗುತ್ತಿದ್ದರು. ಇದರ ಅರ್ಥ ಏನು? ನಮಗೆ ಇದರಿಂದ ಮುಸಿಸಾಗುವಂಥ ನೋವು ಆಗುವುದಿಲ್ಲವೇ?

ಅಧ್ಯಕ್ಷರು : ಆಯಿತು, ಬೇಗ ಮಾತನಾಡಿ ಮುಗಿಸಿಬಿಡಿ.

ಶ್ರೀ ಡಿ.ವಿ. ಸದಾನಂದಗೌಡ : ಬೇಗ ಮಾತನಾಡಿ ಮುಗಿಸಬೇಕೆಂದು ಹೇಳುವುದಾದರೆ ನಾವು ಅವರು ಹೇಳಿದ್ದನ್ನು ಕೇಳಿಕೊಂಡು ಸುಮ್ಮನೆ ಬಿದ್ದುಕೊಂಡಿರಬೇಕೆಂದು ತಮ್ಮ ಅಪೇಕ್ಷೆಯೇ, ಮಾನ್ಯ ಅಧ್ಯಕ್ಷರೆ? ನೀವು ನಮ್ಮ ರಕ್ಷಣೆಗೆ ಬರಬೇಕಾದವರು. ನೀವು ನಮ್ಮ ಗೌರವವನ್ನು ಉಳಿಸಬೇಕಾದವರು.

ಅಧ್ಯಕ್ಷರು : ಎರಡೂ ಕಡೆಯೂ ಸರಿಯಾದ ನ್ಯಾಯ ಒದಗಿಸಿಕೊಡುವುದೇ ನನ್ನ ಧರ್ಮ.

ಶ್ರೀ ಡಿ.ವಿ. ಸದಾನಂದಗೌಡ : ಹಾಗಾದರೆ ತಾವು ನ್ಯಾಯ ಕೊಡುವುದಾದರೆ ನಮ್ಮ ಅಭಿಪ್ರಾಯವನ್ನು ಕಾಯವಿಟ್ಟು ಅವರು ಇದರ ಬಗ್ಗೆ ಒಂದು ಸಣ್ಣ ವಿಷಾದ ವ್ಯಕ್ತಪಡಿಸಲಿ. ನಾವು ಅದಕ್ಕೆ ಒಪ್ಪಿಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : (ಧರಣಿ ಸ್ಥಳದಿಂದ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡುತ್ತಾ) : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಗ್ಗಿನ ಘಟನೆ ಬಗ್ಗೆ 'ಇದು ಒಂದು ಸಣ್ಣಪುಟ್ಟ ವಿಚಾರ' ಎಂದು ಅದನ್ನು ಮಾನ್ಯ ಚಂದ್ರೇಗೌಡರು ತಳ್ಳಿಹಾಕುವಂಥ ಕೆಲಸ ಏನು ಮಾಡುತ್ತಿದ್ದಾರೆ ಇದರ ಬಗ್ಗೆ ನನಗೆ ಬಹಳ

ಖೇದ ಎನಿಸುತ್ತಿದೆ. ಅವರ ಇಲ್ಲಿಯವರೆಗಿನ ರಾಜಕೀಯ, ಸಂಸದೀಯ ಅನುಭವ ಏನಿದೆ ಅವರ ಬಗ್ಗೆ ನನಗೆ ಬಹಳ ಖೇದ ಅನಿಸುತ್ತಿದೆ. ಇದನ್ನು ಈ ರೀತಿ ಅವರು ಪ್ರತಿಷ್ಠೆಯಾಗಿ ತೆಗೆದುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಮೆಕ್ಕೆಜೋಳ ವಿಚಾರವಾಗಿ ಎಷ್ಟೊಂದೂ ಕಾಳಜಿ ಇರುವಂಥದ್ದು ಆಗಿದೆ. ಈ ರೀತಿಯಾದಂಥ ಘಟನಾವಳಿಗಳು ನಮ್ಮ ಸಂಸದೀಯ ವ್ಯವಸ್ಥೆಗೆ ಸರಿಯಲ್ಲ. ತಾವು ದಯವಿಟ್ಟು ಇದನ್ನು ಬಹಳ ಗಹುರವಾಗಿ ತೆಗೆದುಕೊಳ್ಳುವುದು ಬೇಡ. ಮಾನ್ಯ ಅಧ್ಯಕ್ಷರೆ, ಇದು ತಮ್ಮ ಗೌರವ ಸ್ಥಾನಕ್ಕೂ ಧಕ್ಕೆ ತರುವಂಥದ್ದು ಆಗಿದೆ. ಮಾನ್ಯ ಚಂದ್ರೇಗೌಡರು ಇದರ ಬಗ್ಗೆ ಒಂದು ಸ್ಪಷ್ಟೀಕರಣ ಕೊಡಬೇಕು. ಸ್ಪಷ್ಟೀಕರಣ ಕೊಡದಿದ್ದಲ್ಲಿ ಇದು ಇಲ್ಲಿಗೆ ಮುಗಿಯುವುದಿಲ್ಲ. ಇದನ್ನು ತಾವು ಪ್ರತಿಷ್ಠೆಯಾಗಿ ತೆಗೆದುಕೊಳ್ಳುತ್ತಿದ್ದೀರಿ. ರೈತರ ಸಮಸ್ಯೆ ಏನಿದೆ ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಶಾಂತಕುಮಾರ್‌ರವರು, ಕೇಂದ್ರ ಆಹಾರ ಸಚಿವರು, ಇವರ ಜೊತೆ ನಾನು ನಿನ್ನೆಯ ದಿವಸ ಟೆಲಿಫೋನ್‌ನಲ್ಲಿ ಮಾತನಾಡಿದ್ದೇನೆ. ಇದೇ ವಿಷಯವನ್ನು ನಾನು ಬೆಳಿಗ್ಗೆ ಸಹ ಹೇಳಿದ್ದೇನೆ. ಈ ತಿಂಗಳ 28ನೇ ತಾರೀಖಿಗೆ ಮೆಕ್ಕೆಜೋಳ ಖರೀದಿ ಮಾಡುವುದು ಕೊನೆಯಾಗುತ್ತದೆ ಎಂದು ರಾಜ್ಯ ಆಹಾರ ಸಚಿವರಾದ ಶ್ರೀ ಇನಾಂದಾರ್ ಅವರು ಹೇಳಿದರು. 'ನಾನು ಶ್ರೀ ಶಾಂತಕುಮಾರ್ ಅವರನ್ನು ಭೇಟಿ ಮಾಡಿ ಬಂದಿದ್ದೇನೆ, ಅವರು ಅವಧಿಯನ್ನು ವಿಸ್ತರಣೆ ಮಾಡಲಿಕ್ಕೆ ಒಪ್ಪಿದ್ದಾರೆಂದು' ಶ್ರೀ ಇನಾಂದಾರ್‌ರವರು ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಧಾರವಾಡದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿಗಳು, ಕೇಂದ್ರ ಸರ್ಕಾರ ಅವಧಿಯನ್ನು ವಿಸ್ತರಣೆ ಮಾಡಿದೆ, ಅದಕ್ಕಾಗಿ ನಾನು ಕೇಂದ್ರ ಸರ್ಕಾರಕ್ಕೆ ಅಭಿನಂದಿಸುತ್ತೇನೆಂದು ಹೇಳಿದ್ದರು. ಈ ರೀತಿಯಾದ ಬೆಳವಣಿಗೆಗಳು ನಡೆದ ಸಂದರ್ಭದಲ್ಲಿ ಶ್ರೀ ಡಿ.ಬಿ. ಇನಾಂದಾರ್‌ರವರು ಡೆಲ್ಲಿಯಲ್ಲಿದ್ದಾರೆ, ಅವರ ಮತ್ತು ಶ್ರೀ ಶಾಂತಕುಮಾರ್‌ರವರ ನಡುವೆ ಏನು ಮಾತುಕತೆ ನಡೆದಿದೆ? ಶ್ರೀ ಇನಾಂದಾರ್‌ರವರು ಫೋನ್ ಮಾಡಿ, ವಿಷಯ ಅವಸರದ್ದಿದೆ, ಅಸೆಂಬ್ಲಿಯಲ್ಲಿ ಹೋಗಿ ಇದರ ಬಗ್ಗೆ ಚರ್ಚಿಸಿ ಎಂದು ಹೇಳಿದರೋ, ಹೇಗೆ? ಇದರ ಹಿನ್ನೆಲೆಯನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಅಧ್ಯಕ್ಷರು : ಆ ವಿಷಯ ಬಂದಾಗ, ತಾವು ಅದರ ಬಗ್ಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಬೆಳಿಗ್ಗೆ ನಡೆದ ಘಟನೆ ಬಗ್ಗೆ ಸರ್ಕಾರದ ಪರವಾಗಿ, ಕಾನೂನು ಸಚಿವರು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದಿದ್ದರೆ, ಈ ಸದನದ ಗೌರವಕ್ಕೆ ಧಕ್ಕೆಯಾಗುತ್ತದೆ. ಯಾರು ಈ ಸದನಕ್ಕೆ ಗೌರವ ಕೊಡುವುದಿಲ್ಲವೋ, ಸಭಾಪೀಠಕ್ಕೆ ಗೌರವ ಕೊಡುವುದಿಲ್ಲವೋ, ತಮ್ಮ ತೀರ್ಪಿನ, ಸದನದ ನಡವಳಿಕೆಗಳ ವಿರುದ್ಧ ಯಾರು ಹೋಗುತ್ತಾರೆಯೋ, ಅವರನ್ನು ಸಸ್ಪೆಂಡ್ ಮಾಡುವ ಅಧಿಕಾರ ತಮಗಿದೆ. ಅದನ್ನು ನಾವು ಇವತ್ತು ಕೇಳುತ್ತಿಲ್ಲ. ರೈತರು ಸಂಕಷ್ಟದಲ್ಲಿರುವ ಬಗ್ಗೆ ಚರ್ಚೆಯಾಗಬೇಕು, ಅವರು ಇದರ ಬಗ್ಗೆ ವಿಷಾದ ವ್ಯಕ್ತಪಡಿಸಲೆಂದು ಕೇಳುವ ಸಂದರ್ಭದಲ್ಲಿ ಇದಕ್ಕೂ ಇವರು ತಯಾರಿಲ್ಲದೆ, ಇದರ ಬಗ್ಗೆ ಪ್ರತಿಷ್ಠೆಯಾಗಿ ತೆಗೆದುಕೊಳ್ಳುತ್ತಾರೆಂದರೆ, ಹೇಗೆ? ಇವತ್ತು ಮುಖ್ಯಮಂತ್ರಿಗಳು ಇಲ್ಲಿದ್ದರು. ಅವರು ಬೆಳಿಗ್ಗೆಯಿಂದ ಘಟನೆಗಳನ್ನು ನೋಡುತ್ತಾ ಮೂಕ ಪ್ರೇಕ್ಷಕರಾಗಿದ್ದು, ಈಗಲೂ ಮೂಕ ಪ್ರೇಕ್ಷಕರಾಗಿದ್ದಾರೆ ಈ ಘಟನೆ ನಡೆದ ಸಂದರ್ಭದಲ್ಲಿ ಎದ್ದು ಬರುವ ವಾತಾವರಣವನ್ನು ನಾವು ನೋಡಿದ್ದೇವೆ. ಹಾಗಾದರೆ, ಇದರರ್ಥ ಏನಾಗುತ್ತದೆ? ಇದರಿಂದ ಜನರಿಗೆ ಯಾವ ರೀತಿಯ ಸಿಗ್ನಲ್ ಹೋಗುತ್ತದೆ ಎಂಬ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ಇವತ್ತು ನಡೆದ ನಡವಳಿಕೆಗಳು ಸರಿಯೇ, ತಪ್ಪೇ ಎಂಬ ಬಗ್ಗೆ ತಾವು ರೂಲಿಂಗ್ ಕೊಡಿ. ಅವರು ವಿಷಾದ ವ್ಯಕ್ತಪಡಿಸಲು ತಯಾರಿರುವ ಹಾಗೆ ಕಾಣುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಮತ್ತು ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಒಳಗಡೆ ಪ್ರಸ್ತಾಪಿಸಿದಾಗ, ಅವರು ಅನೇಕ ಪಾಯಿಂಟ್‌ಗಳನ್ನು ತಿಳಿಸಿದರು. ಪ್ರತಿಷ್ಠೆ ಮೇಲೆ ನಿಲ್ಲುವುದು ಬೇಡವೆಂದರು. ಪಕ್ಷವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಬೇಡಿ ಎಂದು ನಾನು ಮೊದಲು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಾನು ಹೇಳಿದ್ದು ಏನೆಂದರೆ, ಇಂಥ ಸಣ್ಣಪುಟ್ಟ ಘಟನೆಗಳು ನಮ್ಮ ಸಂಸದೀಯ ನಡವಳಿಕೆಗಳಲ್ಲಿ ಸಹಜವಾಗಿ ನಡೆದು ಬರುತ್ತದೆ. 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿದ ಹಾಗೆ. ಡಿ.ವಿ. ಸದಾನಂದಗೌಡರಿಗೆ ಎಷ್ಟೆಷ್ಟು ಕಲ್ಲುಗಳು ಸಿಗುತ್ತವೆಯೋ?

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ : ಇದು ಸಣ್ಣ ವಿಷಯವಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಡಿ.ವಿ. ಸದಾನಂದಗೌಡರು ರಾಜಕೀಯ ಗಿಮಿಕ್ಸ್ ಎಂದು ಕರೆದರು. ಸಂಸದೀಯ ನಡವಳಿಕೆಗಳಲ್ಲಿ ಹೀಗೆಲ್ಲಾ ಪದಗಳನ್ನು ಬಳಸಿದರೆ, ತುಂಬಾ ವ್ಯಥೆಯಾಗುತ್ತದೆ. ಇದು ಗಂಭೀರವಾದ ವಿಚಾರವೆನ್ನುವುದನ್ನು ಎಲ್ಲರೂ ಒಪ್ಪಿದ್ದೇವೆ. ಈ ವಿಷಯವನ್ನು ಪ್ರತಿಷ್ಠೆಯನ್ನಾಗಿ ಏಕೆ ಮಾಡುತ್ತೀರೋ ನಮಗೆ ಗೊತ್ತಿಲ್ಲ. ಆಳುವ ಪಕ್ಷದ ಸದಸ್ಯರು ಇಲ್ಲಿ ಬರುವುದು ಮೊದಲನೇ ಬಾರಿಯೇನಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಚಂದ್ರೇಗೌಡರವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ವಿಷಯದ ಗಾಂಭೀರ್ಯತೆ ಬಗ್ಗೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರಿಗಾಗಲೀ ತಕರಾರು ಇಲ್ಲ. ಆದರೆ, ಆಡಳಿತ ಪಕ್ಷದ ಸದಸ್ಯರು ಈ ರೀತಿ ನಡೆದುಕೊಳ್ಳಬಹುದೆ, ಈ ಸದನಕ್ಕೆ ಗೌರವ ತರುವ ಪ್ರಶ್ನೆಯೇ? ಅದರ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಬೇಕು. ಅದು ಬಿಟ್ಟು, ಬೇರೆ ಎಲ್ಲಾ ವಿಷಯವನ್ನು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಆಳುವ ಪಕ್ಷದ ಸದಸ್ಯರು ಏಕಾಏಕಿ ಬರಲಿಲ್ಲ, ತಮ್ಮ ಛೇಂಬರಿಗೆ ಬಂದು, ಪರಿಸ್ಥಿತಿಯ ಗಂಭೀರತೆಯನ್ನು ತಮ್ಮೊಡನೆ ಚರ್ಚಿಸಿ, ನಮಗೆ ಅಡ್ಜರ್ನ್‌ಮೆಂಟ್ ಮೋಷನ್ ತರುವ ಅವಕಾಶವಿಲ್ಲ, ನಮ್ಮದೇ ಸರ್ಕಾರದ ಮೇಲೆ ತರುವುದಕ್ಕಾಗುವುದಿಲ್ಲ, ಈ ತಾಂತ್ರಿಕ ತೊಂದರೆಯಿಂದ ಈ ಒಂದು ವಿಶೇಷ ಸಂದರ್ಭವನ್ನು ಪರಿಗಣಿಸಿ ತಮಗೆ ವಿಷಯ ಪ್ರಸ್ತಾಪಿಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ. ನಾನು ಅದಕ್ಕೆಂದೇ ಪ್ರಾರಂಭದಲ್ಲಿಯೇ ಹೇಳಿದೆ, ಇದರಲ್ಲಿ ಎರಡು ವಿಚಾರಗಳಿವೆ. ಮೊದಲನೆಯದಾಗಿ, ಒಟ್ಟಾರೆ ರೈತರ ಸಮಸ್ಯೆ, ಇಳಿದಿರುವ ಬೆಲೆ ಬಗ್ಗೆ ಚರ್ಚೆ ಮಾಡಬೇಕು. ಎರಡನೆಯದಾಗಿ, ಸೀಮಿತವಾಗಿ ಈಗೇನು ಪರ್ಚೇಸ್ ಸೆಂಟರ್‌ಗಳನ್ನು

ಕ್ಲೋಸ್ ಮಾಡುತ್ತಿದ್ದಾರೆ, ಅದನ್ನು ಇಂದೇ ಮುಚ್ಚುತ್ತಾರೆ ಅದಕ್ಕಾಗಿ ಚರ್ಚೆ ಮಾಡಬೇಕೆಂದರು. ಆ ಕಾರಣಕ್ಕಾಗಿ, ಇಲ್ಲಿ ಆಳುವ ಪಕ್ಷದ ಸದಸ್ಯರು ಬಾವಿಗೆ ಬರುವುದು ಮೊದಲನೇ ಸಲವಲ್ಲ. ಇಂಥ ಪ್ರಸಂಗಗಳು ಅನೇಕ ಸಲ ನಡೆದಿದೆ.

ಶ್ರೀ ಕೆ. ಶ್ರೀನಿವಾಸಗೌಡ : ನೀವು ಈ ಕಡೆ ಇದ್ದಾಗ, ಅವರು ಬಾವಿಗೆ ಬರುತ್ತಿದ್ದರು. ಈಗ ನೀವು ಆ ಕಡೆ ಹೋಗಿರುವುದರಿಂದ, ಈಗ ಬಾವಿಗೆ ಬಿದ್ದಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ವಿಚಾರವನ್ನು ಲಘುವಾಗಿ ಮಾತನಾಡುವುದಕ್ಕೆ ನಾನು ಇಚ್ಛಿಪಡುವುದಿಲ್ಲ. ಇದರ ಬಗ್ಗೆ ಸದಸ್ಯರು ಗಂಭೀರವಾಗಿ ಚರ್ಚಿಸಬೇಕೆನ್ನುವ ನಮ್ಮ ಮನಸ್ಸಿನ ಆಲೋಚನೆಯನ್ನು ನೀವು ಅರ್ಥ ಮಾಡಿಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ. ನಾನು ಈಗಲೂ ಹೇಳುತ್ತೇನೆ, ಒಂದು ಪಕ್ಷದ ಸಮಸ್ಯೆ ಎಂದು ನೋಡಬೇಡಿ. ಉದಾಹರಣೆಗೆ : ಹಾಸನದ ಸಮಸ್ಯೆ ಬಂದಾಗ ಹನುಮೇಗೌಡರಿಗೆ ಸ್ಫೂರ್ತಿ ಬರುತ್ತದೆ. ಆಗ ನಮಗೆ ಸಂತೋಷವಾಗುತ್ತದೆ. ಅವರಿಗೆ ಸಿಟ್ಟು ಬಂದಾಗಲೇ ಅವರಿಂದ ಒಳ್ಳೆಯ ಭಾಷಣ ಹೊರಬರುತ್ತದೆ. ಎಲ್ಲರೂ ಕೋಪದಿಂದ, ಇರುವ ಪರಿಸ್ಥಿತಿಯ ನೋವಿನಿಂದ, ಈ ಕೆಲಸ ನಡೆದಿದೆ. ಅದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದು ಬೇಡವೆಂದು ಹೇಳುತ್ತೇನೆ. ಯಾರು ಯಾರ ಪರವಾಗಿ ವಿಷಾದ ವ್ಯಕ್ತಪಡಿಸಬೇಕು? ಇಲ್ಲಿ ಅಪರಾಧವೇನು ನಡೆದಿದೆ? ನಾನು ಸಂಸದೀಯ ನಡವಳಿಕೆಗಳಲ್ಲಿ 30 ವರ್ಷ ದುಡಿದಿದ್ದೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ: ಅದರಲ್ಲಿಯೂ ಮಾನ್ಯ ಚಂದ್ರೇಗೌಡರು ವಿಧಾನಸಭೆಯ ಅಧ್ಯಕ್ಷರಾಗಿ ವಿಜೃಂಬಿಸಿದ್ದವರು. ಲೋಕಸಭೆ, ರಾಜ್ಯಸಭೆ, ವಿಧಾನ ಪರಿಷತ್ತಿನಲ್ಲಿ, ವಿಧಾನ ಸಭೆಯಲ್ಲಿ, ಎಲ್ಲ ಗೌರವಾನ್ವಿತ ಸಭೆಗಳ ಸದಸ್ಯರಾಗಿ ಕೆಲಸ ಮಾಡಿರುವವರು. ಅವರಿಂದ ಇವತ್ತು ಈ ರೀತಿಯಾದ ಉತ್ತರವನ್ನು ನಾವು ನಿರೀಕ್ಷೆ ಮಾಡಿರಲಿಲ್ಲ. ಇವತ್ತು ಬೆಳಿಗ್ಗೆಯಿಂದ ಆಗಿರುವ ನಡವಳಿಕೆಗಳು ನಮ್ಮೆಲ್ಲರಿಗೂ ಸಹ ಅಪಮಾನಿತವಾದ ವಿಚಾರವಾಗಿದೆ. ಈ ಒಂದು ಆಡಳಿತ ಪಕ್ಷದ ಧೋರಣೆಯನ್ನು ನಾವು ಖಂಡಿಸಿ, ಒಂದು ಕ್ಷಣವೂ ಇಲ್ಲಿ ನಿಲ್ಲದೆ, ಸಭಾತ್ಯಾಗ ಮಾಡುತ್ತಿದ್ದೇವೆ. ಅವರು ವಿಷಾದ ವ್ಯಕ್ತಪಡಿಸಬೇಕಿತ್ತು, ಅವರಿಗೆ ನಾಚಿಕೆಯಾಗಬೇಕು.

(ಈ ಹಂತದಲ್ಲಿ ಜನತಾದಳ (ಯು) ಕ್ಕೆ ಸೇರಿದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಚನ್ನಿಗಪ್ಪ : ಈ ಸದನದಲ್ಲಿ ನಾನು ಸುಮಾರು ಏಳು ವರ್ಷಗಳಿಂದ ಸದಸ್ಯನಾಗಿದ್ದೇನೆ. ಇಂಥ ಕೆಟ್ಟ ಸಂಪ್ರದಾಯವನ್ನಿಟ್ಟುಕೊಂಡು ಆಡಳಿತ ಪಕ್ಷದವರು ಪ್ರಜಾಪ್ರಭುತ್ವದಲ್ಲಿ ಯಾವುದೇ ಸ್ಥಾನಮಾನ ಕೊಡದೆ, ಇವತ್ತು ರಾಜ್ಯದಲ್ಲಿ ನಡೆದ ಘಟನೆಗಳಿಗೆ ಸಂಬಂಧಪಟ್ಟಂತೆ ಸರ್ಕಾರವನ್ನು ಕೇಳಬೇಕು, ಅದಕ್ಕೆ ಪರಿಹಾರ ಹುಡುಕಬೇಕೆಂದು ಜಗದೀಶ್ ಶೆಟ್ಟರ್‌ರವರು ಕೊಟ್ಟಿರುವ ನಿಲುವಳಿ ಸೂಚನೆ ಬಗ್ಗೆ ಮಾನ್ಯ ಆಡಳಿತ ಪಕ್ಷದ ಸದಸ್ಯರು ಮಾಡಿದ ಕಟ್ಟುನಿಟ್ಟಿನ ವಿಚಾರವನ್ನು ಅರ್ಥ ಮಾಡಿಕೊಂಡರೆ ಇದು ಯಾರಿಗೂ ಶೋಭೆ ತರುವುದಿಲ್ಲ. ರಾಜ್ಯದಲ್ಲಿ ರೈತರು ಇವತ್ತು ಸಾಯುತ್ತಿರುವ ಕಾಲದಲ್ಲಿ ಇಂಥ ಒಂದು ವಿಚಾರವನ್ನು ಸಣ್ಣ ವಿಷಯವನ್ನಾಗಿ ತೆಗೆದುಕೊಳ್ಳುವುದನ್ನು ನೋಡಿದಾಗ,

ನಮಗೆ ಆಘಾತವಾಗುತ್ತದೆ. ಇಲ್ಲಿ ಶಾಸಕರಾಗಿ ಕೆಲಸ ಮಾಡುವುದು ಅನ್ಯಾಯ ಎನಿಸುತ್ತದೆ. ಆದರೂ ಸಹ ನಮ್ಮ ಪಕ್ಷದ ಪತಿಯಿಂದ ಇಂಥ ದುರ್ಘಟನೆಗಳು ಇನ್ನು ಮುಂದೆ ನಡೆಯಬಾರದೆಂದು ಹೇಳಿ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜನತಾದಳ (ಜಾತ್ಯಾತೀತ) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿಯವರೆಗೆ ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು ಆದರೆ, ಮಾನ್ಯ ಚಂದ್ರೇಗೌಡರು ಸಹ ಬೆಳಿಗ್ಗೆ ನಡೆದ ಘಟನೆಯನ್ನೇ ಇನ್ನೂ ಸಹ ಡಿಫೆಂಡ್ ಮಾಡಿಕೊಳ್ಳುವ ಕೆಲಸ ನಡೆಯುತ್ತಿದೆ. ಇದನ್ನೇ ಪ್ರತಿಷ್ಠೆಯ ವಿಷಯವನ್ನಾಗಿ ಮಾಡದೆ, ಒಂದು ಹಂತಕ್ಕೆ ಮುಗಿಸಿ, ರೈತರ ಸಮಸ್ಯೆ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದಾಗಬೇಕಿತ್ತು. ಆದರೆ, ಇವತ್ತು ಅವರು ಇದನ್ನು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಂಡಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಆ ಭಾಗದ ಶಾಸಕರಿಗೂ ಕೂಡ ಕಳೆದ ಮೂರು ತಿಂಗಳಿನಿಂದ ಏನೇನು ಆಗಿದೆ ಮೆಕ್ಕೆಜೋಳದ ಅಣೇವಾರಿ ಏನೇನು ಆಗಿದೆ ಮತ್ತು ಬೇರೆ ಬೇರೆ ರೈತರು ಬೆಳೆದಂಥ ಉತ್ಪನ್ನಗಳ ಅಣೇವಾಗಿ ಏನೇನು ಆಗಿದೆ ಎಂಬ ವಿಷಯ ಎಲ್ಲಾ ಗೊತ್ತಿದೆ. ಯಾವ ರೀತಿ ಮಂದಗತಿಯಲ್ಲಿ ಖರೀದಿಯಾಯಿತು ಆಗ ಇವರ ಜವಾಬ್ದಾರಿ ಏನು ಎಂಬುದು ಜನರಿಗೂ ಕೂಡ ಗೊತ್ತಿದೆ. ಹಿಂದಿನ ಮೂರು ತಿಂಗಳಲ್ಲಿ ಮಾಡದೇ ಇರತಕ್ಕಂಥ ಕೆಲಸವನ್ನು ಈ ಒಂದು ದಿವಸದಲ್ಲಿ ಮಾಡುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ಚರ್ಚೆಯಾಗಬೇಕಾಗಿತ್ತು, ರಾಜ್ಯ ಸರ್ಕಾರದ ಜವಾಬ್ದಾರಿ ಏನು? 75 ಕೋಟಿ ರೂಪಾಯಿಗಳ ಅವರ್ತನಿಧಿಯ ಬಗ್ಗೆ ಕೂಡ ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಏಕೆಂದರೆ, ಮೂರು ತಿಂಗಳಿನಿಂದ 75 ಕೋಟಿ ರೂಪಾಯಿ ಅವರ್ತನಿಧಿ ಇಟ್ಟಿದ್ದೇವೆಂದು ಹೇಳಿಕೊಂಡು ಬಂದರು, ಇವತ್ತಿನ ದಿವಸ ನಾವು ಇದನ್ನು ದೀಪ ಹಚ್ಚಿ ಹುಡುಕಬೇಕಾಗಿದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯನ್ನು ರದ್ದುಗೊಳಿಸಿ ಈ ವಿಷಯದ ಬಗ್ಗೆ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅವಕಾಶ ಮಾಡಿಕೊಟ್ಟರೆ ಒಳ್ಳೆಯದು, ಆದರೆ ಇವತ್ತಿನ ಬೆಳಿಗ್ಗೆಯಿಂದ ಸದನದಲ್ಲಿ ಆಗಿರತಕ್ಕಂಥ ನಡಾವಳಿಯ ಬಗ್ಗೆ ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಬಹುಶಃ ಮಾನ್ಯ ಚಂದ್ರೇಗೌಡರವರು ಈ ರೀತಿಯಾಗಿ ಇದನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಳ್ಳುತ್ತಾರೆನ್ನುವ ಕಲ್ಪನೆ ನನಗಿರಲಿಲ್ಲ. ಬೆಳಿಗ್ಗೆ ನಡೆದ ನಡಾವಳಿಯ ಬಗ್ಗೆ ನನಗೂ ವಿಷಾದವಾಗುತ್ತದೆ. ಇವತ್ತಿನವರೆವಿಗೂ ನಾವು ಈ ಸದನದಲ್ಲಿ ಈ ಸರ್ಕಾರದ ಜೊತೆಗತ ಸಹಕಾರವನ್ನು ಮಾಡಿಕೊಂಡು ಬಂದಿದ್ದೇವೆ. ಮಾನ್ಯ ಚಂದ್ರೇಗೌಡರವರಂಥವರು ಇದನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡು ಆಡಳಿತ ಶಾಸಕರ ಬಗ್ಗೆ ಡಿಫೆಂಡ್ ಮಾಡುತ್ತಾರೆಂದರೆ, ಇದಕ್ಕೆ ನಾವು ಉತ್ತರ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಅದಕ್ಕಾಗಿ ನಾನು ಕೂಡ ಪ್ರತಿಭಟನೆಯಲ್ಲಿ ಭಾಗವಹಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರತಿಭಟನೆಯಲ್ಲಿ ಭಾಗವಹಿಸಲು ಸದನದ ಬಾವಿಗೆ ಬಂದರು)

(ಗೊಂದಲ)

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪ್ರತಿಭಟನೆಯನ್ನು ನಿಲ್ಲಿಸಲು ಅನೇಕ ಬಾರಿ ಮನವಿ ಮಾಡಿಕೊಂಡರೂ ಸಹ ಪ್ರತಿಭಟನೆಯನ್ನು ನಿಲ್ಲಿಸಲಿಲ್ಲ)

ಅಧ್ಯಕ್ಷರು : ಈಗ ಸದನವು ಮುಂದುವರಿದು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರಲಿದೆ.

(ಸದನವು ಸಂಜೆ 4 ಗಂಟೆ ಏನು ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 1ನೇ ಮಾರ್ಚ್ ಮಾಹೆ 2001ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ